# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXI - 9 ಸಪ್ಟೆಂಬರ್ 2003

### ಈ ಸಂಚಿಕೆಯಲ್ಲಿ


ಅಸೋಸಿಯೇಶನ್‌ನಲ್ಲಿ :

ಶಿಲ್ಪ ಕಲಾಶಿಬಿರ "ನನಸಾದ ಕನಸು" ● ರಮಾ ವಸಂತ್ 2

Forthcoming Programmes 3

How the Fibre Mural was made ● **M.A.N. Prasad** 5

ಸಂದರ್ಶನ :

ವೆಂಕಟಾಚಲಪತಿ ಹುಟ್ಟಾ ಕಲಾವಿದ ● ಭವಾನಿ ಭಾರ್ಗವ 7

ಶಿಬಿರದಲ್ಲಿ ಪಾಲ್ಗೊಂಡ ಕಲಾವಿದರ ಅನಿಸಿಕೆಗಳು 8

ಭಾರತೀಯ ಕಲೆ - ಭಾಗ 18 9

ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ

ಸುತ್ತ-ಮುತ್ತ 10


**Rs. 5/-**


The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"


ಅಸೋಸಿಯೇಷನ್‌ನಲ್ಲಿ

## ಶಿಲ್ಪ ಕಲಾ ಶಿಬಿರ

# ನನಸಾದ ಕನಸು

✍ ರಮಾ ವಸಂತ್

ಮೈಸೂರು ಅಸೋಸಿಯೇಷನ್, ತನ್ನ ಅಮೃತ ಮಹೋತ್ಸವದಲ್ಲಿ, ಕಲೆಗಳಲ್ಲಿ ತರಬೇತಿ ನೀಡುವ




ವೇದಿಕೆಯ ಮೇಲೆ ಮರಿತಾಮಾಚಾರ್ ನೀಲಕಂಠಾಚಾರ್. ಸಾಬಣ್ಣಾ ವರ, ದೊರೆಸ್ವಾಮಿ ಮತ್ತು ವೆಂಕಟಾಚಲಪತಿ

ಒಂದು ಕೇಂದ್ರವನ್ನು ರಚಿಸುವ ನಿರ್ಧಾರವನ್ನು ಕೈಗೊಂಡಿತು. ಈ ಕೇಂದ್ರವು ವಿವಿಧ ಕಲೆಗಳು ಶಿಬಿರಗಳನ್ನೂ, ಕಮ್ಮಟಗಳನ್ನೂ ಏರ್ಪಡಿಸಿ, ಕಲೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡುವುದರಲ್ಲಿ ನೆರವಾಗಬೇಕು. ಎಂಬುದೇ ಇದರ ಮುಖ್ಯಗುರಿ. ಈ ನಿಟ್ಟಿನಲ್ಲಿ ಮೈಸೂರು ಅಸೋಸಿಯೇಷ್ಣ ಕಾರ್ಯಪರವಾಗಿದೆ. ಯುವಕಲಾವಿದರ ಸಂಗೀತ ಸಮ್ಮೇಳನ, ಮಕ್ಕಳಿಗಾಗಿ ಏರ್ಪಡಿಸಿದ್ದ ನಾಟಕ ಕಮ್ಮಟಗಳು ಇತ್ತೀಚೆಗೆ ನಡೆದ ಕೆಲವು ಕಾರ್ಯಕ್ರಮಗಳು.

ಶಿಲ್ಪಕಲೆ ಅತಿಪ್ರಾಚೀನಕಲೆಯಾದರೂ ಹೆಚ್ಚು ಜನರಿಗೆ ಅದರ ಬಗ್ಗೆ ಪರಿಚಯವಿಲ್ಲ. ಇತರ ಕಲೆಗಳಂತೆ ಈ ಕಲೆಯನ್ನು ಕಲಿಯಲು ಯುವಪೀಳಿಗೆ ಮುಂದು ಬರುವುದು ಕಮ್ಮಿ. ಕಾರಣ ಇದು ಬಹಳ ಕಷ್ಟವಾದ ಕಲೆ. ಈ ಕಲೆಯ ಬಗ್ಗೆ ಹೆಚ್ಚು ಜನರಿಗೆ ಪರಿಚಯ ಮಾಡಬೇಕು ಮತ್ತು ಹೆಚ್ಚು ಜನರಲ್ಲಿ ಈ ಕಲೆಯ ಬಗ್ಗೆ ಆಸಕ್ತಿ ಮೂಡಿಸಬೇಕು ಎಂಬ ಉದ್ದೇಶದಿಂದ ಮೈಸೂರು ಅಸೋಸಿಯೇಷ್ಣ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಜೊತೆಗೂಡಿ ಮುಂಬೈಯಲ್ಲಿ ಒಂದು ಭಿತ್ತಿ ಶಿಲ್ಪ ಕಲಾ ಶಿಬಿರವನ್ನು ಏರ್ಪಡಿಸಿದರು.

ಕರ್ನಾಟಕದಿಂದ ಸುಮಾರು 9 ಜನ ಕಲಾವಿದರು ಬಂದು ಈ ಶಿಬಿರದಲ್ಲಿ ಒಂದು ಭಿತ್ತಿ ಶಿಲ್ಪವನ್ನು ತಯಾರಿಸಿದರು. 10 ದಿನಗಳ ಕಾಲ ಅವಿರತವಾಗಿ ದುಡಿದು ಉತ್ತಮ ಮಟ್ಟದ ಬೃಹದಾಕರದ ಒಂದು ಬಿತ್ತಿ ಶಿಲ್ಪವನ್ನು ಅಸೋಸಿಯೇಷನ್ನಿಗೆ ನೀಡಿದರು.

ಆಗಸ್ಟ್ 19ರಿಂದ 22ರ ವರೆಗೆ ಪತಿದಿನವೂ ಸಂಜೆ ಆಸಕ್ತರಿಗೆ ಶಿಬಿರದಲ್ಲಿ ಆಗುತ್ತಿರುವ ಕೆಲಸವನ್ನು ವೀಕ್ಷಿಸುವ ಅವಕಾಶವಿದ್ದಿತು. ಅನೇಕ ಉತ್ಸಾಹಿಗಳು ಬಂದು ನೋಡಿ, ಕಲಾವಿದರನ್ನು ಮಾತನಾಡಿಸಿ, ಈ ಕಲೆಯ ಬಗ್ಗೆ ತಿಳಿದುಕೊಂಡರು. ಅಸೋಸಿಯೇಷನ್ನಿನ ಅನೇಕ ವರ್ಷಗಳ ಕನಸು ನೆನಸಾಯಿತು. ಯಾವುದೇ



ಭಿತ್ತಿ ಶಿಲ್ಪದ ಉದ್ಘಾಟನೆಯ ನಂತರ ಮುಖ್ಯ ಅತಿಥಿ ಕಲಾವಿದರೊಡನೆ

ಪ್ರದೇಶಕ್ಕಾದರೂ ಆಸ್ತಿ ಎಂದರೆ ಅಲ್ಲಿನ ಪ್ರಕೃತಿ, ಕಲೆ ಮತ್ತು ಕಲಾಕಾರರು. ಕರ್ನಾಟಕದಲ್ಲಿ ಶಿಲ್ಪ ಕಲಾಕೃತಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿದೆ. ಕರ್ನಾಟಕದಲ್ಲಿರುವ ಸಣ್ಣ ಸಣ್ಣ ಹಳ್ಳಿಗಳಲ್ಲಿರುವ ಪ್ರತಿಯೊಂದು ಹಿಂದಿನ ಕಾಲದ ದೇವಸ್ಥಾನಗಳಲ್ಲಿ ಸಹ ಈ ಶಿಲ್ಪ ಕಲಾ ವಿನ್ಯಾಸನನ್ನು ಕಾಣಬಹುದು. ಪ್ರಸಿದ್ಧವಾದ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಮುಂತಾದ ಕಡೆಗಳಲ್ಲಿನ ಶಿಲ್ಪಕಲಾ ಕೃತಿಗಳು ವಿಶ್ವವಿಖ್ಯಾತ. ಇಂತಹ ಭವ್ಯವಾದ ಶಿಲ್ಪ ಕಲಾಕೃತಿಗಳ ಮಾದರಿಯೊಂದನ್ನು ಈ ಕಲಾವಿದರು ತಮ್ಮ ಬಿತ್ತಿಶಿಲ್ಪದಲ್ಲಿ ಮೂಡಿಸಿದ್ದಾರೆ.



ಅಧ್ಯಕ್ಷ ದೊರೆಸ್ವಾಮಿ ಮುಖ್ಯ ಅತಿಥಿಗಳಾದ ಸಾಬಣ್ಣಾ ವರಿಗೆ ನೆನಪಿನ ಕಾಣಿಕೆಯನ್ನು ಕೊಡುತ್ತಿರುವುದು.

ಆಗಸ್ಟ್ 23ರಂದು ಅನಾವರಣದ ಕಾರ್ಯಕ್ರಮವು ಪ್ರಾರ್ಥನಾ ಗೀತೆಯೊಂದಿಗೆ

ಆರಂಭವಾಯಿತು. ನಂತರ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆ ಸ್ವಾಮಿಯವರು ಅತಿಥಿಗಳನ್ನು ಸ್ವಾಗತಿಸಿ ಹೂ ಗುಚ್ಛವನ್ನು ನೆನಪಿನ ಕಾಣಿಕೆಯನ್ನು ನೀಡಿದರು. ನಂತರ ಶ್ರೀ ಮಂಜುನಾಥಯ್ಯನವರು ಅತಿಥಿಗಳ ಪರಿಚಯವನ್ನು ಮಾಡಿಕೊಡುತ್ತಾ ತಮ್ಮ ಅನೇಕ ವರ್ಷಗಳ ಕನಸು ನೆನಸಾಯಿತು. ಇದಕ್ಕಾಗಿ ತಾವು ಪಟ್ಟ ಪ್ರಯತ್ನವನ್ನು ತಿಳಿಸಿದರು. ಸಮಾರಂಭದ ಮುಖ್ಯ ಅತಿಥಿಗಳಾಗಿ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನ ಪ್ರಾಧ್ಯಾಪಕ, ಆರ್ಟ್ಸ್ ಅಂಡ್ ಕ್ರಾಫ್ಟ್ಸ್‌ನ ಮುಖ್ಯಸ್ಥ ಶ್ರೀ ಎಸ್. ಬಿ. ಸಾಬಣ್ಣವರ್ ಕರ್ನಾಟಕ ಶಿಲ್ಪ ಕಲಾ ಅಕಾಡೆಮಿಯ ಅಧ್ಯಕ್ಷ ಎಸ್. ಜಿ. ನೀಲಕಂಠಾಚಾರ್ ಮತ್ತು ರಿಜಿಸ್ಟ್ರಾರ್ ಎನ್. ಮರಿಶಾಮಾಚಾರ್ ಅವರು ಉಪಸ್ಥಿತರಿದ್ದರು.

ಸಾಬಣ್ಣವರ್ ಅವರು ಮಾತನಾಡಿ ಇಂತಹ ಭವ್ಯವಾದ ಮತ್ತು ಕಲಾ ಕೃತಿಯನ್ನು ನಿರ್ಮಿಸಿ ಮುಂಬೈಯಿನ ಜನರನ್ನು ಕರ್ನಾಟಕಕ್ಕೆ ಆಕರ್ಷಿಸಿದ್ದಾರೆ ಎಂದರು. ಕರ್ನಾಟಕದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಈ ಕೃತಿಯಲ್ಲಿ ಯಕ್ಷಗಾನ, ಸಂಗೀತ, ನೃತ್ಯ, ಗೋಮಟೇಶ್ವರ, ಅರಸರಾದ ಹೊಯ್ಸಳ, ಗಂಗ ಮತ್ತು ಮೈಸೂರು ಅರಮನೆಯ ಮುದ್ರೆ / ಲಾಂಛನಗಳು, ಅಲ್ಮಡಿಯ ಶಾಸನ, ಹಂಪಿಯ ರಥ ಬಾದಾಮಿಯ ನಟರಾಜ ಇತ್ಯಾದಿ ಅನೇಕ ವಿಷಯಗಳು


## THE MYSORE ASSOCIATION, BOMBAY

### FORTHCOMING PROGRAMMES


| Date | Programme | Time | Venue |
|---|---|---|---|
| 22.09.03 | Play reading | 7.00 p.m. | Auditorium |
| 06.10.03 | Commencement of Advanced Music workshop on rare compositions of Mysore Vasudevacharya by Vidwan R. K. Padmanabha | | Conf. Hall |
| 09.10.03 | Classical Carnatic Vocal concert by Vidwan R. K. Padmanabha | 7.00 p.m. | Auditorium |
| 11.10.03 | Musical Ballet Prahlada Bhakta Vijaya by Vidwan R. K. Padmanabha's troupe | 7.00 p.m. | Auditorium |
| 13.10.03 | Presentation ceremony of the workshop Mysore Association Presents two Kannada plays of 'Prayoga Ranga' Bangalore | 7.00 p.m. | Auditorium |
| 17.10.03 | 'Matthade Sanje' A translation of Mahesh Elkunchwar's play | 7.00 p.m. | Auditorium |
| 18.10.03 | 'Namma Nimmolagobba' an adaptation of Agatha Christi's Novel | 7.00 p.m. | Auditorium |

*All are cordially invited*

All music lovers are requested to register for the workshop



ಶಿಬಿರದ ನಿರ್ದೇಶಕರಾದ ಶಿಲ್ಪಿ ವೆಂಕಟಾಚಲಪತಿಯವರನ್ನು ಅಧ್ಯಕ್ಷ ದೊರೆಸ್ವಾಮಿ ಸನ್ಮಾನಿಸುತ್ತಿರುವುದು.




ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾದ ನೀಲಕಂಠಾಚಾರ್ ಮಾತನಾಡುತ್ತಿರುವುದು.

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For INDIAN AIRLINES & JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 2789 1970*2789 1972
2789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 2407 2984*2409 3573
2407 7750




*ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಆದ ಮರಿಶಾಮಾಚಾರ್ ಮಾತನಾಡುತ್ತಿರುವುದು.*

10 ಅಡಿ ಎತ್ತರ ಮತ್ತು 8 ಅಡಿ ಅಗಲದ ಈ ಭಿತ್ತಿ ಚಿತ್ರವನ್ನು ಅಸೋಸಿಯೇಷನ್ನಿನ ಮುಂಭಾಗದ ಗೋಡೆಯಲ್ಲಿ ಪ್ರತಿಷ್ಠಿಸಲಾಗಿದೆ. ನೋಡಿದೊಡನೆ ಕರ್ನಾಟಕದ ಭವ್ಯ ಶಿಲ್ಪ ಕಲೆಯ ಪರಂಪರೆಯನ್ನು ಮನಸ್ಸಿಗೆ ತಂದು, ಶ್ರದ್ಧಾಭಾವ ಮೂಡಿಸುವ ಈ ಕಲಾಕೃತಿಯು ಡಿ.ವಿ.ಜಿ. ಅವರು ಹೇಳಿರುವ ''ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ'' ಎಂಬುದನ್ನು ನೆನೆಪಿಸುತ್ತದೆ. ಕೈ ಮುಗಿದು ಒಳಗೆ ಬರಬೇಕು''


ಶ್ರೀ ಎಂ.ಎ.ಎನ್. ಪ್ರಸಾದ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಅಡಕವಾಗಿದೆ. ಎಂದರು. ಇಂತಹ ಒಂದು ಚಿತ್ರದಿಂದ ಇಡೀ ಕರ್ನಾಟಕವನ್ನೇ ಮುಂಬೈ ನಾಗರೀಕರಿಗೆ ಪರಿಚಯಿಸುವಂತೆ ಮಾಡಿರುವ ಅಸೋಸಿಯೇಷನ್ನ್‌ನ ಆಡಳಿತ ವರ್ಗದವರಿಗೆ ಮತ್ತು ಶಿಲ್ಪಕಲಾ ಅಕಾಡೆಮಿಗೆ ಅಭಿನಂದನೆ ಸಲ್ಲಿಸಿದರು.

ನಂತರ ನೀಲಕಂಠಾಚಾರ್, ಮರಿಶಾಮಾ ಚಾರ್ ಅವರು ಮಾತನಾಡಿ ಈ ಶಿಲ್ಪಿಗಳು ಕಷ್ಟಜೀವಿಗಳು ಮತ್ತು ಇವರು ಇಂತಹ ಒಂದು ಅದ್ಭುತ ಸಾಂಸ್ಕೃತಿಕ ಕಲೆಯನ್ನು ಸಮಾಜಕ್ಕೆ ನೀಡುವಲ್ಲಿ ಯಾವ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುವುದಿಲ್ಲ ಎಂದರು.



*ದೊರೆಸ್ವಾಮಿಯವರು ಪುಷ್ಪ ಗುಚ್ಛ ನೀಡುತ್ತಿರುವುದು.*



*ಶಿಬಿರದಲ್ಲಿ ತಯಾರಾದ ಭಿತ್ತಿ ಶಿಲ್ಪ.*

ಇಂತಹ ಒಂದು ಚಿತ್ರವನ್ನು ತಯಾರಿಸಲು ಅವಕಾಶ ಮಾಡಿಕೊಟ್ಟಂತಹ ಮೈಸೂರು ಅಸೋಸಿಯೇಷನ್ನಿನ ಆಡಳಿತ ವರ್ಗದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಅಧ್ಯಕ್ಷ ದೊರೆಸ್ವಾಮಿಯವರು ಶಿಲ್ಪಿ ವೆಂಕಟಾಚಲಪತಿಯವರನ್ನು ಶಾಲು ಹೊದಿಸಿ ಗೌರವಿಸಿದರು. ವೆಂಕಟಾಚಲಪತಿಯವರು ತಮ್ಮ ಸಹೋದ್ಯೋಗಿಗಳ ನಿರಂತರ ಪ್ರಯತ್ನ ಹಾಗೂ ಶ್ರಮದಿಂದ ಕೇವಲ ಸ್ವಲ್ಪ ಕಾಲಾವಕಾಶದಲ್ಲಿ ಈ ಚಿತ್ರದ ತಯಾರಿಕೆ ಸಾಧ್ಯವಾಯಿತು ಎಂದರು. ನಂತರ ಇವರೊಡನೆ ಶ್ರಮಿಸಿದ ಎಲ್ಲ ಶಿಲ್ಪಿಗಳಿಗೂ ನೆನಪಿನ ಕಾಣಿಕೆ ಮತ್ತು ಹೂಗುಚ್ಛಗಳನ್ನು ನೀಡಿ ಗೌರವಿಸಲಾಯಿತು.


## MATRIMONIAL

For a smartha Kannada Brahmin Girl 25 years. 5'3" Kaushik Gothra. Krithika Nakshtra, B.Com, C.A. Computer Literate, working in a leading C.A. Firm, Mumbai. Alliance invited from professionally qualified, well employed Kannada Brahmin boys.

Contact : Sri. N. S. Begoor, Tel. : 2895 0511, E-mail : archanabegoor@vsnl.net

❀ ❀ ❀

Alliance invited for Smartha Boy, Software Engineer (B.T. PGDM) 33 years. Goutama Gothra, required non working, adjustable home loving girl. Horoscope essential.

Contact Prof. M. R. Kumaraswamy, Tel. : 2660 7715

# HOW THE FIBRE MURAL WAS MADE

- M.A.N. Prasad

We knew that the artists from Karnataka would come and do a sculpture here in fibre, but did not know how they would go about it. While talking to an artist friend of mine, I learnt some broad details. So I was anxiously waiting for the team to come here and start the work so that I could learn more about it. It was a rare opportunity to see these artists work and learn about the various stages in the art of making fibre murals. As many of the readers might have missed out on seeing the various stages of the sculpture being made, I am sharing with them the process involved briefly.




*The team of artists drawing sketches on the clay base*

To begin with, clay is spread uniformly to the size of the intended piece of sculpture on a plastic sheet and a base about two inches thick is made.

The next step is to plan the layout of the mural. Normally, a layout of the mural is drawn on paper. This needs to be transferred on to the base. The various items to be depicted in the mural are suitably sketched on the clay base, using a pointed instrument. Any change, or addition/alteration is still possible at this stage.

Once the sketch is finalized, artists sculpt the items sketched using clay. Initially clay is applied on the sketch and a rudimentary image is formed. Later this is carved finely to bring out the intricate details and give a good finish to the image.



*A closer view of some of the items sketched*



*Three-dimensional figure being created over the sketch. Note the rudimentary nature of the figure and the sketch being visible in some portions.*

For giving good effect, portions of the mural are finished in metal. This involves working on sheet metal. Sheets of copper/brass are used. The intended figure is carved in three dimensions by beating the sheet into shape, using a soft base. Blowtorch is used to heat the metal sheet and make it more amenable to working. Finer details are worked upon and the piece is finished properly.

Once the sculpting in clay is



*Artists are working to bring out finer intricate details in the sculptures.*



*The team - busy at work. Notice the books being referred for authenticity.*



*Working on the metallic portions of the mural*

complete, a mould of the same is prepared using plaster of Paris. This mould is a negative of the sculpture. Since the mural is large, the mould is made in 3 to 4 parts. This mould is intended for only a single reproduction. If multiple reproductions are planned, instead of plaster of Paris, rubber is used.

Once the mould is dry and ready, it is assembled suitably and a replica of the clay sculpture is produced using acrylic material and fibre. Depending upon the size and shape of the mural the thickness is determined so that it retains its shape. Where necessary, a reinforcing frame of metal is used so that the mural retains its shape.

The mural is washed thoroughly to get rid of any adhering clay, plaster or other materials, especially in the intricately carved areas and allowed to dry. The metallic portions are affixed using adhesives. The mural is given a base coat of paint using a spray gun. Artists finish each item in the mural with detailed painting using suitable oil colours. Different shades and deft touches highlight the various items in the mural while retaining an overall harmony in the composition. The paint

*(contd. pg. 12)*

# ವೆಂಕಟಾಚಲಪತಿ - ಹುಟ್ಟಾ ಕಲಾವಿದ

✍ ಭವಾನಿ ಭಾರ್ಗವ



ವೆಂಕಟಾಚಲಪತಿಯವರ ಕಲಾಕೃತಿ

ಮೈಸೂರು ಅಸೋಸಿಯೇಶನ್‌ನಲ್ಲಿ ಕಳೆದ ತಿಂಗಳು ನಡೆದ ಭಿತ್ತಿಶಿಲ್ಪ ಪ್ರಾತ್ಯಕ್ಷಿಕೆಯ ಶಿಬಿರದಲ್ಲಿ ಮುಖ್ಯ ರೂವಾರಿಯಾಗಿದ್ದ ಶ್ರೀ ವೆಂಕಟಾಚಲ ಪತಿಯವರು ಒಬ್ಬ ಹುಟ್ಟಾ ಕಲಾವಿದ. ಇವರ ಮನೆತನದ ಬೇಸಾಯದಲ್ಲಿ ತೊಡಗಿದ್ದಾಗ ಇವರು ಮಾತ್ರ ತಮ್ಮ ದೇವನಹಳ್ಳಿಯಲ್ಲಿದ್ದ ಹನುಮಂತಾಚಾರ್ ಅವರ ಸ್ಟುಡಿಯೋ ಒಳನುಗ್ಗಿ ಅಲ್ಲಿ ಏನು ನಡೆಯುತ್ತಿದೆ ಎಂದು ವೀಕ್ಷಿಸುತ್ತಾ ಆಸಕ್ತರಾಗಿ ಅದರಲ್ಲೇ ತಮ್ಮನ್ನು ತಾವು ತೊಡಗಿಸಿಕೊಂಡರು. ಮುಂದೆ ಶಾಲೆಯ ಓದು ಮುಗಿಸಿ ಬೆಂಗಳೂರಿಗೆ ಬಂದು ಶ್ರೀ ಬಿ.ಕೆ. ಎಸ್. ವರ್ಮಾರವರಿಂದ ಪಡೆದ ಕಾಗದವನ್ನು ಶ್ರೀ ಆ.ನ. ಸುಬ್ಬರಾವ್ ಅವರಿಗೆಕೊಟ್ಟು ಅವರ ಮಾರ್ಗದರ್ಶನ ದಲ್ಲಿ ತಮ್ಮ ಶಿಲ್ಪಕಲಾ ಅಭ್ಯಾಸವನ್ನು ಮುಂದುವರಿಸಿ ಕಲಾಮಂದಿರ ಸ್ಕೂಲ್ ಆಫ್ ಆರ್ಟ್ಸ್, ಬೆಂಗಳೂರು ಇಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಯಲ್ಲಿ ಡಿಪ್ಲೊಮಾ ಪಡೆದರು.

ಶ್ರೀ ವೆಂಕಟಾಚಲಪತಿಯವರ ಸಂದರ್ಶನವನ್ನು ನೇಸರುವಿಗಾಗಿ ಅವರು ಮೈಸೂರು ಅಸೋಸಿಯೇಶನ್‌ನ ಭಿತ್ತಿಶಿಲ್ಪವನ್ನು ಮಾಡುವ ಸಂದರ್ಭದಲ್ಲಿ ಮಾಡಿದಾಗ ಅವರು ತಮ್ಮ ಜೀವನದ ಹಿನ್ನೆಲೆಯ ಬಗ್ಗೆ ಈ ವಿಚಾರವನ್ನು ತಿಳಿಸಿದರು. ವೆಂಕಟಾಚಲಪತಿಯವರು ಮುಂದೆ ೨೫ ವರ್ಷಗಳು ಬೆಂಗಳೂರಿನ ವಿಶ್ವೇಶ್ವರಯ್ಯ ಔದ್ಯೋಗಿಕ ಹಾಗೂ ತಾಂತ್ರಿಕ ವಸ್ತು ಸಂಗ್ರಹಾಲಯ (ಮ್ಯೂಸಿಯಂ)ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುತ್ತಾರೆ. ಈ ಸಂಗ್ರಹಾಲಯದಲ್ಲಿ ಅವರು ಭಾರತ ಸರಕಾರಕ್ಕಾಗಿ ಟೆರಾಕೋಟಾ, ಕಲ್ಲು ಮತ್ತು ಕಂಚು ಈ ಮಾಧ್ಯಮಗಳನ್ನು ಬಳಸಿ ಅನೇಕ ಶಿಲ್ಪಕೃತಿಗಳನ್ನು ಮಾಡಿಕೊಟ್ಟು ಪ್ರಸಂಶೆ ಹಾಗೂ ಬಹುಮಾನಗಳನ್ನು ಪಡೆದಿದ್ದಾರೆ. ಕಳೆದ ಹತ್ತು ವರ್ಷಗಳಿಂದ ತಮ್ಮದೇ ಆದ ಒಂದು ಸ್ಟುಡಿಯೋ ಇಟ್ಟುಕೊಂಡು ತಮ್ಮ ಶಿಲ್ಪಕಲಾವೃತ್ತಿ ಮತ್ತು ಕಾಯಕವನ್ನು ಮುಂದುವರಿಸಿ ಕೊಂಡು ಬರುತ್ತಿದ್ದಾರೆ. ಇವರ ಸ್ಟುಡಿಯೋನಲ್ಲಿ ಕಲಿತವರಲ್ಲಿ ಕೆಲವರು ಅಸೋಸಿಯೇಶನ್‌ನ ಭಿತ್ತಿಶಿಲ್ಪ ಶಿಬಿರದಲ್ಲೂ ಭಾಗವಹಿಸಿದ್ದಾರೆ.

ವೆಂಕಟಾಚಲಪತಿಯವರು ಮುಂದೆ ಮಾತನಾಡುತ್ತಾ ಭಿತ್ತಿ ಶಿಲ್ಪಗಳ ಪ್ರಾರಂಭದ ಕೆಲವು ಉದಾಹರಣೆಗಳನ್ನು ಕೊಡುವುದರೊಂದಿಗೆ ಅವುಗಳ ಪ್ರಕಾರಗಳು, ಅದನ್ನು ಹೇಗೆ ಆಧುನೀಕರಣ ಗೊಳಿಸಲಾಗಿದೆ ಎಂಬುದನ್ನು ವಿವರಿಸಿದರು. ನಾಗಾರ್ಜುನಕೊಂಡ, ಅಮರಾವತಿ, ಅಜಂತಾ, ಎಲ್ಲೋರಗಳಲ್ಲಿ ನಾವು ಹಿಂದಿನ ಕಾಲದ ಭಿತ್ತಿಶಿಲ್ಪಗಳನ್ನು ಕಾಣಬಹುದಾಗಿದೆ. ರೋಂ ನಗರದ ವ್ಯಾಟಿಕನ್‌ನಲ್ಲೂ ಸಹ ಕಾಣುತ್ತೇವೆ. ಇದನ್ನು ಇಂಗ್ಲೀಷಿನಲ್ಲಿ 'ಫ್ರೆಸ್ಕೊ' (Fressco) ಎನ್ನುತ್ತಾರೆ. ಈ ಕಲೆಯ ಸರ್ವತೋಮುಖ ಬೆಳವಣಿಗೆಯು ಐರೋಪ್ಯದೇಶಗಳಲ್ಲಿ ರೆನೇಸ್ಸೆಸ್ (Renaisance)ನ ನಂತರ ಜಗದಾದ್ಯಂತ ಹರಡುವ ಮೂಲಕ ಎಲ್ಲಡೆಯೂ ಕಾಣುವಂತಾಯ್ತು. ಆಂಗ್ಲರು ಇದನ್ನು ''ಮ್ಯೂರಲ್ಸ್'' (Murals) ಎಂದರು. ಮತ್ತು ಕಟ್ಟಡಗಳ ಅಲಂಕಾರಕ್ಕಾಗಿಯೂ ಇದನ್ನು ಬಳಸಲಾರಂಭಿಸಿದರು.

ಗೋಡೆಗೆ ಲೇಪ ಬಳಿದು ತಯಾರು ಮಾಡಿಕೊಂಡು ಮಿನೆರಲ್ ಬಣ್ಣಗಳನ್ನು ಉಪಯೋಗಿಸಿ ಚಿತ್ರಕ್ಕೆ ಬಣ್ಣ ತುಂಬುತ್ತಾರೆ. ಈಚಿನ ಹೊಸ ವೈಜ್ಞಾನಿಕ ಬೆಳವಣಿಗೆಯಲ್ಲಿ ಫೈಬರ್ ಮ್ಯೂರಲ್ ಬಂದಿದೆ. ಇದು ಬಹಳ ಹಗುರವಾಗಿಯೂ, ಬಹಳ ಮಜಬೂತಾಗಿದ್ದು ಬಹಳ ಕಾಲ ಬಾಳಿಕೆ ಬರುವಂತಾಗಿರುತ್ತದೆ. ಹೀಗಾಗಿ ಈಗ ಲೋಹದ ಜಾಗದಲ್ಲಿ ಫೈಬರ್ ಹೆಚ್ಚು ಬಳಕೆಗೆ ಬಂದಿರುತ್ತದೆ. ಜೇಡಿ ಮಣ್ಣು ಮತ್ತು ಪ್ಲಾಸ್ಟರ್ ಬಳಸಿ ಮೊದಲು ಅಚ್ಚು ತಯಾರಿಸಲಾಗುತ್ತದೆ. ಇದಕ್ಕೆ ಮೇಣವನ್ನು ರಿಲೀಸಿಂಗ್ ಏಜೆಂಟ್ ಅಂದರೆ ಬೇರ್ಪಡಿಸುವ ಮಾಧ್ಯಮವಾಗಿ ಸುಲಭವಾಗಿ ಹೊರತೆಗೆಯಲು ಅನುಕೂಲವೆಂದು ಸೇರಿಸುತ್ತಾರೆ. ಮುಂದೆ ಆಕ್ಸಲರೇಟರ್ ಆಗಿ ಪಾಲಿಯೆಸ್ಟರ್ ರೆಸಿನ್ ಅನ್ನು ಬೇಗನೆ ಒಣಗಿಸುವುದಕ್ಕಾಗಿ ಉಪಯೋಗಿಸುತ್ತಾರೆ. ಗಟ್ಟಿಯಾಗಿಸಲು ಜೆಲ್‌ನ ಕೋಟಿಂಗ್ ಕೊಡುತ್ತಾರೆ. ಇದರಲ್ಲಿ ಗಾಜಿನ ಪುಡಿಯನ್ನು ಮಜಬೂತಾಗಿ ಮಾಡಲು ರೀಇನ್‌ಫೋರ್ಸ್‌ಮೆಂಟ್‌ಗೆಂದು ಬಳಸುತ್ತಾರೆ. ಬೇರ್ಪಡಿಸಿದ್ದಾದ ಮೇಲೆ ಪೇಂಟ್ ಮಾಡಿ ಬಣ್ಣ ಹಚ್ಚುವುದಲ್ಲದೆ, ಎದ್ದು ಕಾಣುವುದಕ್ಕಾಗಿ ಲೋಹದ ಅಚ್ಚುಗಳಿಂದ ಎಂಬಾಸ್ ಮಾಡಿದ್ದಾರೆ. ಬಣ್ಣವನ್ನು ಹೆಚ್ಚುಕಾಲ ಉಳಿಯುವಂತೆ ಮಾಡಲು ಲ್ಯಾಕರ್ ಅನ್ನು ಸ್ಪ್ರೇ ಮಾಡುತ್ತಾರೆ. ಹೀಗೆ ತಯಾರಾದ ಶಿಲ್ಪವನ್ನು ಗೋಡೆಗೆ ಮೊಳೆಹೊಡೆದು ಕೂರಿಸುತ್ತಾರೆ. ಮುಂದೆ 60 ವರ್ಷದ ನಂತರ ಇದನ್ನು ಇನ್ನೊಮ್ಮೆ ಪೇಂಟ್ ಮಾಡುವುದು ಉತ್ತಮವೆಂದು ಅವರು ತಿಳಿಸಿದರು.

ಈ ಕಲೆಯ ಬೆಳವಣಿಗೆಗೆ, ಕಲಾಕಾರರಿಗೆ ಪ್ರೋತ್ಸಾಹ ಸಿಗುತ್ತದೆಯೇ? ಹೊಸ ಕಲಾವಿದರು ಇದನ್ನು ಕಲಿಯಲು ಮುಂದೆ ಬರುತ್ತಿದ್ದಾರೆಯೇ? ಅವರ ಭವಿಷ್ಯವೇನು? ಎಂದು ಕೇಳಿದಾಗ ಕಲೆಗೆ ಈಗ ಮೊದಲಿಗಿಂತಲೂ ಹೆಚ್ಚು ಪ್ರೋತ್ಸಾಹ ಸಿಗುತ್ತಿದೆ ಎಂದು ಜನರು ತಮ್ಮ ಮನೆಯ ಅಲಂಕಾರದಲ್ಲೂ ಹೆಚ್ಚು ಆಸಕ್ತಿ ವಹಿಸುತ್ತಿರುವುದರಿಂದ ಕೇವಲ ಸರಕಾರಿ ಕಟ್ಟಡಗಳಲ್ಲದೆ ಸಾಮಾನ್ಯ ನಾಗರಿಕರೂ ಸಹ ಇದಕ್ಕೆ ಅವಕಾಶವೀಯುತ್ತಿದ್ದಾರೆಂದೂ ತಿಳಿಸಿದರು. ಇದು ಕಷ್ಟದ ಕೆಲಸ. ಸ್ವಲ್ಪ ಕಲಾತ್ಮಕ ದೃಷ್ಟಿಯೂ ಬೇಕು. ಶ್ರಮಪಟ್ಟರೆ ಸಾಕಷ್ಟು ಪ್ರತಿಫಲವೂ ಸಿಗುತ್ತದೆ



ವೆಂಕಟಾಚಲಪತಿಯವರ ಕಲಾಕೃತಿ

ಎಂದರು. ಅವರ ಸ್ಟುಡಿಯೋದಲ್ಲೇ ಈಗ ನಾಲ್ಕೈದು ವಿದ್ಯಾರ್ಥಿಗಳು ಕಲಿಯಲು ಬರುತ್ತಿದ್ದಾರೆಂದೂ ಹವ್ಯಾಸಿಗಳಿಗಿಂತಲೂ ವೃತ್ತಿ ನಿರತರಲ್ಲಿ ಹೆಚ್ಚು ಸಮರ್ಪಣಭಾವ ಮತ್ತು ನಿಷ್ಠೆ (Dedication) ಇರುತ್ತದೆಂದೂ ಬೇಗನೆ ಹೆಸರು ಮಾಡಲು ಆತುರ ಪಡದೆ ಜೀವನವನ್ನು ಕಲಾತ್ಮಕ ದೃಷ್ಟಿಯಿಂದ ನೋಡುತ್ತಾ,ಸಾಹಿತ್ಯವನ್ನು ಅಭ್ಯಾಸಮಾಡುತ್ತಾ ತಮ್ಮಲ್ಲಿ ಪರಿಪಕ್ವತೆಯನ್ನು ಬೆಳೆಸಿಕೊಳ್ಳುವ ಅವಶ್ಯಕತೆಯಿದೆ ಎಂದರು. ✦

# ಶಿಬಿರದಲ್ಲಿ ಪಾಲ್ಗೊಂಡ ಕಲಾವಿದರ ಅನಿಸಿಕೆಗಳು

ಭಿತ್ತಿ ಶಿಲ್ಪಕ್ಕೆ ಮಣ್ಣೂ ಕೂಡ ಒಂದು ಮೂಲವಸ್ತು ನಿಜ; ಆದರೆ ಬರಿಯ ಮಣ್ಣಿನಿಂದ ಮನೋಭಿತ್ತಿಯಲ್ಲಿ ಮೂಡಿದ ಭಾವನೆಗಳಿಗೆ ಮೂರ್ತರೂಪ ಕೊಡಲು ಸಾಧ್ಯವೇ? ಮಣ್ಣನ್ನು ಅಭಿವ್ಯಕ್ತಿಗೆ ಒಲಿಸಿಕೊಳ್ಳಲು ಹದವಾಗಿ ನೀರನ್ನು ಬೆರೆಸಬೇಕು; ಕಾಲಿನ ತುಳಿತದಲ್ಲಿ ಬೇಕಾದ ಹದಕ್ಕೆ ತಂದುಕೊಳ್ಳಬೇಕು. ಆಗ ಅದು ಮೂರ್ತೀಕರಿಸಲು ತಕ್ಕ ಮಣ್ಣಾಗುತ್ತದೆ. ಕಲೆಯ ಹುಟ್ಟಿನ ನೆಲೆ ಯಾವುದು ಪ್ರತಿಭೆಯೋ ವ್ಯುತ್ಪತ್ತಿಯೋ? ಅಥವಾ ಎರಡರ ಸಂಯೋಗವೋ ಮೂಲಮಣ್ಣು ಪ್ರತಿಭೆಯೋ ವ್ಯುತ್ಪತ್ತಿಯೋ? ಅಥವಾ ಎರಡರ ಸಂಯೋಗವೋ. ಮೂಲ ಮಣ್ಣು ಪ್ರತಿಭೆಯಾದರೆ ಸೇರಿಸುವ ನೀರು, ತುಳಿದಾಟಗಳನ್ನು ವ್ಯುತ್ಪತ್ತಿ ಎನ್ನಬಹುದೆ? ಅಂದರೆ ಕಲೆಗೆ ಪ್ರತಿಭೆ ಮತ್ತು ವ್ಯುತ್ಪತ್ತಿ ಎರಡೂ ಅನಿವಾರ್ಯ ಎಂದಂತಾಯಿತಲ್ಲವೇ?

ಮೈಸೂರು ಅಸೋಸಿಯೇಶನ್ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಜಂಟಿಯಾಗಿ ಆಯೋಜಿಸಿದ್ದ 'ಭಿತ್ತಿಶಿಲ್ಪ' ಕಾರ್ಯಾಗಾರದಲ್ಲಿ ಮಣ್ಣನ್ನು ಹದಗೊಳಿಸಲು ತುಳಿದಾಡುತ್ತಿದ್ದಾಗ ಈ ಚಿಂತನಾ ಸರಣಿಯ ಬಿದಕಾಟಗಳು ನನ್ನಲ್ಲಿ ಆರಂಭಗೊಂಡಿತು. ತುಳಿದಾಟದ ವೇಳೆಯಲ್ಲಿ ಪಾದಪಡಿಯಿಂದ ಮೇಲೆ ಬಂದ ಮಣ್ಣು ಪ್ರತಿ ಘಳಿಗೆಯಲ್ಲೂ ಹೊಸ ಹೊಸ ರೂಪ ತಳೆಯುತ್ತಿತ್ತು. ಹಾಗೆ ಪ್ರತಿಭೆಯ ಮೇಲೆ ಒತ್ತಡಗಳು ಬಿದ್ದಾಗ ಅದು ಹಲವು ರೀತಿಯಲ್ಲಿ ಅಭಿವ್ಯಕ್ತಗೊಳ್ಳುವುದೇ ಎಂಬ ಪ್ರಶ್ನೆಗಳು ಮುಂದುವರಿದಿತ್ತು. ಈ ಪ್ರಶ್ನಾವಳಿಗಳು ಮನೋಭಿತ್ತಿಯಲ್ಲಿ ಹರಡಿಕೊಳ್ಳುತ್ತಿದ್ದಂತೆ ಮನದ ತಾಕಲಾಟಗಳಿಗೆ ಮೂರ್ತಸ್ವರೂಪವನ್ನು ನೀಡುವ ಭಿತ್ತಿಯಾಗಿ ಹೊರಗೆ ಮಣ್ಣಿನ ಪದರವೂ ಅಣಿಗೊಂಡಿತ್ತು. ಕರ್ನಾಟಕ ಸಂಸ್ಕೃತಿಯನ್ನು ಪ್ರತಿಭಿಂಬಿಸಲು ಮನದಲ್ಲಿ ಮೂಡಿಕೊಂಡ ಕಾತರತೆಗೆ ಕೈಗಳು ಸ್ಪಂದಿಸತೊಡಗಿದವು. ಕೆಲವೇ ಹೊತ್ತಿನ ಹಿಂದೆ ನಮ್ಮ ಕಾಲುಗಳ ಆಘಾತದಿಂದ ನರಳಿದ್ದ ಮಣ್ಣು ಈಗ ಅವನ್ನೆಲ್ಲ ಮರೆತಿದೆಯೋ ಎಂಬಂತೆ ನಮ್ಮ ಕೈಯ ತಾಳಕ್ಕೆ ನರ್ತಿಸಿದವು. ಈಗ ಆ ಮಣ್ಣು ಕೇವಲ ನಿರ್ಜೀವವೆನಿಸುವ ಮಣ್ಣಾಗಿ ಉಳಿಯಲಿಲ್ಲ. ನಮ್ಮ ಬಾವನೆಗಳಿಗೆ ಸ್ಪಂದಿಸುತ್ತಿರುವ ಮಿತ್ರನಂತೆ ಜೀವ ತಳೆದಿತ್ತು. ಕರ್ನಾಟಕದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಶಿಲ್ಪಗಳು ಸ್ಪಷ್ಟವಾಗಿ ರೂಪುಗೊಂಡಿತ್ತು. ಇದರೊಂದಿಗೆ ಕೃತಿಯ ಪೂರ್ವಾಂಶವನ್ನು ಯಶಸ್ವಿಯಾಗಿ ಮುಗಿಸಿದ್ದೆವು. ಉತ್ತರಾಂಗದ ತಾಂತ್ರಿಕ ಕ್ರಿಯೆಗಳ ಬಳಿಕ ಶಿಲ್ಪವು ಅಂತಿಮ ರೂಪದೊಂದಿಗೆ ನಮ್ಮೆದುರು ಅನಾವರಣಗೊಂಡಿತು. ಕವಿ ತನ್ನ ಕೃತಿಗೆ ತಾನೇ ಮಣಿಯುವಂತೆ ನಮ್ಮೆದುರು ಮೂಡಿಕೊಂಡಿದ್ದ ಕೃತಿಗೆ ನಾನು ಮನದಲ್ಲೇ ಮಣಿದೆ. ಕೃತಿಯನ್ನು ನಿರ್ಮಿಸದ ಕಲಾವಿದರಲ್ಲಿ ನಾನೂ ಕೂಡಾ ಒಬ್ಬ; ಆದರೆ ಆಕ್ಷಣ ಸಹೃದಯನ ನೆಲೆಯಲ್ಲಿ ನಿಂತು ಕೃತಿಯನ್ನು ಅವಲೋಕಿಸುತ್ತಿದ್ದೆ. ಈ ಕೃತಿಯು ಕರ್ನಾಟಕವನ್ನು ಸಮಗ್ರವಾಗಿ ಪ್ರತಿನಿಧಿಸಬಲ್ಲದೇ ಎಂಬ ಅನುಮಾನ ಕಾಡಿತು. ಮರುಘಳಿಗೆಯಲ್ಲಿ ಉತ್ತರವೂ ಮನದಲ್ಲಿ ಮೂಡಿತು. ನೂರಾರು ವರ್ಷಗಳ ಕಾಲ ಸಾಮ್ರಾಜ್ಯವನ್ನು ನೆನಪಿಸುವ ಹಂಪಿಯ ಕಲ್ಲಿನ ರಥ, ತ್ಯಾಗ ವೈರಾಗ್ಯಗಳನ್ನು ಎತ್ತಿ ಹಿಡಿದ ಗೊಮ್ಮಟನ ವಿಗ್ರಹ, ಭಾರತೀಯ ಪ್ರಾಚೀನ ಕಲಾಪದ್ಧತಿಗಳ ಸಂಕೇತವಾಗಿ ಇಂದಿಗೂ ಉಳಿದು ಬಂದಿರುವ ಯಕ್ಷಗಾನ, ಜನಪದ ಕಲೆಯ ಸಂಕೇತವಾಗಿ ನಂದೀಕೋಲು, ಕಲೆಯ ಅಲೌಕಿಕತೆಯನ್ನು ಸಾರುವ ಬಾದಾಮಿಯ ಗಂಧರ್ವರು, ಕರ್ನಾಟಕ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಗಂಗರು, ಹೊಯ್ಸಳರು ಹಾಗೂ ಮೈಸೂರು ರಾಜರ ಲಾಂಛನಗಳು ಇವೆಲ್ಲವೂ ಕರ್ನಾಟಕದ ಸಂಸ್ಕೃತಿಯನ್ನು ಎತ್ತಿ ಹಿಡಿಯದೇ? ಬಾದಾಮಿ ಗುಹೆಯಲ್ಲಿರುವ ನಟರಾಜನ ಭವ್ಯ ಮೂರ್ತಿಯ ಪ್ರತಿಕೃತಿ ಕರ್ನಾಟಕವಷ್ಟೇ ಅಲ್ಲ, ಇಡಿಯ ಭಾರತ ಅಷ್ಟೇಕೆ ಸಮಗ್ರ ಸೃಷ್ಟಿಗೆ ಸಂಕೇತವಲ್ಲವೇ !

ನಾಡಿನ ಬೇರೆ ಬೇರೆ ಭಾಗಗಳಿಂದ ಬಂದ ಕಲಾವಿದರು ಒಂದಾಗಿ, ಒಂದೇ ವಿಷಯವನ್ನು ಕುರಿತು, ಒಂದೇ ಕಲಾಕೃತಿಯನ್ನು ನಿರ್ಮಿಸಿದ್ದು ಈ ಶಿಬಿರದ ಒಂದು ವಿಶೇಷ. ಹತ್ತಾರು ಕೈಗಳು, ಅದೂ ಪರಸ್ಪರ ಪರಿಚಯವಿಲ್ಲದವು; ಹತ್ತಾರು ತಲೆಗಳು, ನೂರಾರು ಆಲೋಚನೆಗಳನ್ನು ಹೊತ್ತಿಕೊಂಡಿರುವಂಥವು ಈ ಬಹುವಿಧತ್ವವು ಏಕತ್ವವನ್ನು ಸಾಧಿಸಿದ್ದು, ಇಂಥದೊಂದು ಅಪೂರ್ವ ಸಾಧ್ಯತೆಗೆ ಅವಕಾಶವನ್ನು ಒದಗಿಸುವ ಶಿಬಿರವನ್ನು ಆಯೋಜಿಸಿದ್ದು ನಮ್ಮ ಸಂಸ್ಕೃತಿಯ ಅಖಂಡತೆಗೆ ನಿದರ್ಶನದಂತಿತ್ತು. ಹಲವು ಕಲಾವಿದರ ಪ್ರತಿಭೆ, ವ್ಯುತ್ಪತ್ತಿಗಳ ರಸಬಿಂದುಗಳು ನಿರ್ಮಿಸಿರುವ ರಸಭಿತ್ತಿಯ ಸಾರ್ಥಕ್ಯ ಸಹೃದಯರು ಇದನ್ನು ಸವಿದಾಗಲೇ ಅಲ್ಲವೇ?

- ವಿನಯ ಹೆಗ್ಡೆ

ಮುಂಬೈ ಡೈರಿ. ಓದುತ್ತಿರುವಾಗ ಮೈಸೂರು ಅಸೋಸಿಯೇಷರ್ ಬಗ್ಗೆ ಬಂದಿದ್ದೆ. ಆದರೆ ಅಲ್ಲಿ. 10/12 ದಿನಗಳನ್ನು ಕಳೆಯುವಂತಾ ಅವಕಾಶ ಇಷ್ಟು ಬೇಗ ಬರುತ್ತೆ ಅಂತ ಅಂದುಕೊಂಡಿರಲಿಲ್ಲ ಅದನ್ನು ಶಿಲ್ಪಕಲಾ ಅಕಾಡೆಮಿ ಹಾಗು ನಿಮ್ಮ ಸಹಯೋಗ ನಮಗೆ ತಂದಿತ್ತಿತ್ತು. ಭಿತ್ತಿ ಶಿಲ್ಪ ಕಾರ್ಯಾಗಾರರದಲ್ಲಿ ಪಾಲ್ಗೊಂಡ ಕಲಾವಿದನಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಹೊರನಾಡ ಕನ್ನಡಿಗರಾದ ನೀವು, ಸಮಸ್ತ ಕನ್ನಡಿಗರೂ ಹೆಮ್ಮೆ ಪಡುವಂತಹ ಕಾರ್ಯ ಕೈಕೊಂಡಿದ್ದೀರಿ. ನಿಮ್ಮ ಕನ್ನಡಾಭಿಮಾನ ಉಪಚರಿಸಿದ ರೀತಿ ಖುಶಿ ತಂದಿತ್ತು.

ಮ್ಯಾನೇಜರ್‌ರಾದ ಶ್ರೀ ಮಧುಸೂಧನ್‌ರು ರೈಲು ನಿಲ್ದಾಣಕ್ಕೆ ಬಂದು ಸ್ವಾಗತಿಸಿ, ಬರಮಾಡಿಕೊಂಡಿದ್ದಲ್ಲವೆ ನಾವು ಹೊತ್ತಲ್ಲದ ಹೊತ್ತಲ್ಲಿ ಯಾವ ಸಾಮಾನ್ನ ಬೇಕೆಂದರೂ ಬಹು ಅಸ್ಥೆಯಿಂದ. ತಂದಿರಿ. ಸಾರ್ ಎರಡು ವಾರ ಪೂರ್ತಿ ಅತಿಥಿಯಂತೆಯೇ ಸತ್ಕರಿಸಿದ ನಿಮ್ಮ ಹ್ಯಾಂಗೆ ಮರೆಯಲಿ. ಸಮಯ ಸಿಕ್ಕಾಗ ಬಂದು, ಕುಶಲ ವಿಚಾರಿಸಿ, ಸಲಹೆ ನೀಡಿ ನಮ್ಮ ಬೆನ್ನು ತಟ್ಟಿದ ಡಾ। ಮಂಜುನಾಥ್, ಮಂಜುನಾಥಯ್ಯ, ಪ್ರಸಾದರಂತವರನ್ನು ಹೇಗೆ ಮರೆಯಲಿ. ನಮ್ಮ ತಂಡದಲ್ಲೇ ಇದ್ದು ಶಿಬಿರವನ್ನು ಸ ಸಂತಸವಾಗಿಟ್ಟು ಒಂದು ಉತ್ತಮ ಕೃತಿ ರಚಿಸಿದ ಹಾಗೂ ಜೊತೆಗೆ ಎರಡೂ ವಾರ ಪೂರ್ತಿ ಕಳೆದ ಕಲಾವಿದರುಗಳನ್ನು ಮರೆಯುವದುಂಟೆ. ಹಿರಿಯ ಕಲಾವಿದರಾಗಿ ಶಿಬಿರದ ನಿರ್ದೇಶಕರಾಗಿ, ಮಾರ್ಗದರ್ಶನವಿತ್ತ ಚಲಪತಿಯವರನ್ನು, ಛೇ... ಸಾಧ್ಯವೇ ಇಲ್ಲ ಮರೆಯಲು. ಸಾಬಿಕ್ಕಾನವರ ಆಶೀರ್ವಾದ ಪೂರ್ವಕ ನೆನಪಿನ ಕಾಣಿಕೆ, ರಾಘು ಕೊಡುತ್ತಿದ್ದ ಕಾಫಿ, ಮುಂಬೈಯ ಊಟ ತಿಂಡಿ, ಕನ್ನಡ ಶಾಲೆಯ ವಸತಿ ಯಾವುದನ್ನು ಮರೆಯಲು ಸಾಧ್ಯವಿಲ್ಲ. ಹಾಗಾಗಿ ಅದೊಂದು ಶಾಶ್ವತ ನೆನಪು.

ಹೌದು ಇಂತಹ ಕಾರ್ಯಕ್ರಮ ಸಂಘಟಿಸಿ, ಹಿರಿ, ಕಿರಿಯ ಕಲಾವಿದರಿಗೆ ಅವಕಾಶವಿತ್ತಿದ್ದೀರಿ. ಕನ್ನಡ ವಸ್ತುವನ್ನೆ.... ವಿಷಯವಾಗಿಸಿ ಕನ್ನಡ ಅಭಿಮಾನವನ್ನು ಮೆರೆದಿದ್ದೀರಿ. ಒಂದು ಉತ್ತಮ ಕೃತಿ ಮಾಡುವುದಕ್ಕೆ ಕಾರಣರಾಗಿದ್ದೀರಿ. ಸೂಕ್ತವಾದ ಸ್ಥಳದಲ್ಲಿ, ಪ್ರತಿಷ್ಠಾಪಿಸಿದ್ದೀರಿ. ಊಟ, ಉಪಚಾರ, ಸತ್ಕಾರ, ಸನ್ಮಾನಗಳಿಂದ ಆದರಿಸಿದ್ದಿರಿ. ಗೌರವಿಸಿದ್ದಿರಿ. ಇವೆಲ್ಲವೂ ನಮ್ಮ ಅತೀವ ಸಂತಸಕ್ಕೆ ಕಾರಣವಾಗಿವೆ. ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಮೈಸೂರು ಅಸೋಸಿಯೇಷರ್ ಬಗ್ಗೆ, ಕಲಾವಿದನೊಬ್ಬನ ಜೀವನದಲ್ಲಿ ಮೈಲಿಗಲ್ಲಾಗುವಂತಹ ಕಾರ್ಯಕ್ರಮಸಂಘಟಿಸಿದ ಕೀರ್ತಿ ನಿಮ್ಮದು, ಪಾಲ್ಗೊಂಡ ಭಾಗ್ಯ ನಮ್ಮದು. ನಮ್ಮ ಮುಂಬೈ ಪ್ರವಾಸ ನೆನಪಿನಂಗಳದಲ್ಲೊಂದು ಶಾಶ್ವತ ಬೃಂದಾವನ ಎಂದರೆ ಅತಿಶಯವಲ್ಲ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಹಾಗೂ ಮೈಸೂರು ಅಸೋಸಿಯೇಷರ್ ಉಭಯ ಸಂಸ್ಥೆಗಳಿಗೂ ನಾನು ಅಭಾರಿ.

- ರಾಘವೇಂದ್ರ ಹೆಗ್ಡೆ

# ಭಾರತೀಯ ಕಲೆ

ಭಾಗ - 18

ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

ಭೋಯಕೈಲಾಸ ಎಂಬುದು ೫ ಗುಹೆಗಳ ಗುಂಪಾಗಿದ್ದು, ಮೊದಲನೇಯದರಲ್ಲಿ ಜೈನ ದೇವತೆಯಾದ ಚಕ್ರೇಶ್ವರಿಯನ್ನು ಕಾಣುತ್ತೇವೆ. ಈದಕ್ಕೆ ಹನ್ನೆರಡು ಕೈಗಳಿದ್ದು ಈಗ ಕೆಲವು ಮಾತ್ರ ಉಳಿದುಕೊಂಡಿದೆ. ಎಡಭಾಗದ ಕೈಗಳಲ್ಲಿ ಕಮಲ, ಚಕ್ರ, ಶಂಖ ಮತ್ತು ಗದೆಗಳನ್ನು ಕಾಣುತ್ತೇವೆ. ಬಲಭಾಗದಲ್ಲಿ ಒಂದು ಕೈ ಮಾತ್ರ ಉಳಿದಿದ್ದು, ಅದು ಖಡ್ಗವನ್ನು ಹಿಡಿದಂತಿದೆ. ದೇವಿಯು ತನ್ನ ವಾಹನದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾಳೆ. ಇದೇ ಗುಂಪಿನ ಮತ್ತೊಂದು ಗುಹೆಯಲ್ಲಿ ಇಂದ್ರನ ಸಭೆಯ ಶಿಲ್ಪ ಫಲಕವೊಂದಿದ್ದು ಅದರ ಮಧ್ಯಭಾಗದಲ್ಲಿ ಸಿದ್ಧಕಿ ಜೈನ ದೇವತೆಯು ಸಿಂಹದ ಮೇಲೆ ಲಲಿತಾಸನ ಭಂಗಿಯಲ್ಲಿ ಕಳಿತಿರುವುದನ್ನು ಕಾಣುತ್ತೇವೆ. ಒಂದು ಕೈ ಆಕೆಯ ತೊಡೆಯ ಮೇಲಿದ್ದು, ಮತ್ತೊಂದು ಕೈ ನಾಶವಾಗಿದೆ. ಆಕೆಯ ಸುತ್ತಲು ವಾನರರು, ಶುಕಗಳು ಮತ್ತೊ ಕೊಕ್ಕರೆಗಳು ಗುಂಪುಗುಂಪಾಗಿ ನಿಂತಿವೆ. ಅಂತೆಯೇ ಕೆಲವು ಪರಿಚಾರಿಕೆಯರು ದೇವಿ ಸುತ್ತಮುತ್ತ ನಿಂತಿದ್ದಾರೆ.

ರಾಷ್ಟ್ರಕೂಟ ಕಲೆಯ ಮತ್ತೊಂದು ಹಂತವನ್ನು ಎಲಿಫೆಂಟಾ ಗುಹೆಗಳಲ್ಲಿ ಕಾಣುತ್ತವೆ. ಎಲ್ಲೋರ ಗುಹೆಗಳ ಶಿಲ್ಪಕಲೆಯ ಮೇಲೆ ದಕ್ಷಿಣದ ಪ್ರಭಾವವನ್ನು ಕಂಡರೆ, ಎಲಿಫೆಂಟಾ ಗುಹೆಗಳಲ್ಲಿ, ದಖ್ಖನಿ ಶೈಲಿಯ ಪರಿಪೂರ್ಣತೆಯನ್ನು ಕಾಣುತ್ತೇವೆ. ಇಲ್ಲಿನ ದೊಡ್ಡ ಗುಹೆಯಲ್ಲಿ ಮಹೇಶಮೂರ್ತಿ ಶಿವ, ಕಲ್ಯಾಣಸುಂದರ ಮೂರ್ತಿ ನಟರಾಜ ಮತ್ತು ಅಂಧಕಾಸುರನ ವಧಾ ಮೂರ್ತಿ ಶಿಲ್ಪಗಳನ್ನು ಕಾಣುತ್ತೇವೆ. ಮಹೇಶ ಮೂರ್ತಿ ಶಿಲ್ಪಗಳನ್ನು ಕಾಣುತ್ತೇವೆ. ಮಹೇಶಮೂರ್ತಿ ಶಿವ ವಿಗ್ರಹವು ಉತ್ತರದ ದ್ವಾರಕ್ಕೆ ಎದುರಿನಲ್ಲಿದ್ದು ನಮ್ಮನ್ನು ಅತಿ ಹೆಚ್ಚು ವಿಸ್ಮಯಗೊಳಿಸುತ್ತದೆ. ಶಿವನ ಮಧ್ಯದಲ್ಲಿರುವ ಮುಖವು ಶಾಂತ, ಗಂಭೀರವಾಗಿದ್ದು, ಎಡಬದಿಯ ಮುಖವು ರುದ್ರಮನೋಹರವಾಗಿದ್ದದು, ಬಲಬದಿಯ ಮುಖವು ಯೌವನ ಮತ್ತು ಶಾಂತತೆಯನ್ನು ಹೊಮ್ಮಿಸುತ್ತಿವೆ. ಹೀಗೆ ಮೂರು ಮುಖಗಳಲ್ಲಿಯೂ ಭಿನ್ನ ಬಿನ್ನ ಭಾವಗಳನ್ನು ತೋರಿಸುವಲ್ಲಿ ಕಲಾವಿದ ತನ್ನ ಜಾಣ್ಮೆಯನ್ನು ಪ್ರದರ್ಶಿಸಿದ್ದಾನೆ. ಅಂಧಕಾಸುರವಧಾ ಮೂರ್ತಿಯಲ್ಲಿ ರೌದ್ರ ಹಾಗೂ ವಿಭಾವಗಳನ್ನು ಕಾಣುತ್ತೇವೆ. ಶಿವನು ರಾಕ್ಷಸನನ್ನು ತನ್ನ ಕೋರೆ ಹಲ್ಲುಗಳಿಂದ ತಿವಿದಿದ್ದು, ಬೀಳುತ್ತಿರುವ ರಕ್ತದ ಹನಿಗಳನ್ನು ಒಂದು ಬಟ್ಟಲಿನಲ್ಲಿ ಶೇಖರಿಸುವಂತಿದ್ದು ಶಿವನ ಮೇಲೆ ಕೈಗಳು ಆನೆಯ ಚರ್ಮವನ್ನು ಮೇಲ್ಹಾವಣಿಯ ರೀತಿಯಲ್ಲಿ ಹಿಡಿದಂತಿದೆ. ಮತ್ತೊಂದು ಅಂಕಣದಲ್ಲಿ ಕಲ್ಯಾಣ ಸುಂದರ ಮೂರ್ತಿಯಾದ ಶಿವನನ್ನು ಕೆತ್ತಲಾಗಿದೆ. ಇಲ್ಲಿ ಶಿವಪಾರ್ವತಿಯರ ವಿವಾಹವನ್ನು ಚಿತ್ರಿಸಿದ್ದು, ಶಿವನ ಜಟಾಮಕುಟದ ಹಿಂದೆ ಇರುವ ಪ್ರಭಾವಳಿಯು ಬಹುಸುಂದರವಾಗಿದೆ. ಪಾರ್ವತಿಯು ತೆಳುವಾದ ಶರೀರವನ್ನು ಹೊಂದಿದ್ದು, ಆಕೆಯ ತಲೆಯು ಶಿವನ ಕಡೆ ಬಾಗಿದ್ದು, ಕಣ್ಣುಗಳು ಮಾತ್ರ ನಾಚಿಕೆಯಿಂದ ಭೂಮಿಯನ್ನು ನೋಡುತ್ತಿವೆ. ಶಿವನ ಬಲಗಡೆ ಬ್ರಹ್ಮನು ಪುರೋಹಿತನಾಗಿ ಮತ್ತು ವಿಷ್ಣು ಪಾರ್ವತಿಯ ತಂದೆಯಾಗಿ ಕಾಣಿಸಿಕೊಂಡಿದ್ದಾರೆ. ಹಾರುವ ಮಿಥುನಗಳು ಈ ದೈವ ದಂಪತಿಗಳನ್ನು ಹರಸುತ್ತಿವೆ. ಗಂಗಾಧರ ಮೂರ್ತಿ ಎಂಬುದು ಮತ್ತೊಂದು ಸುಂದರ ಶಿಲ್ಪವಾಗಿದ್ದು, ಶಿವನ ಜಟೆಯಲ್ಲಿ ಗಂಗೆಯನ್ನು ಕೂರಿಸಿದ್ದು ಆಕೆಯ ಬಾಯಿಯಿಂದ ನೀರು ಕೆಳಗೆ ಬೀಳುವುದನ್ನು ಬಹಳ ಸಹಜವಾಗಿ ಚಿತ್ರಿಸಲಾಗಿದೆ.

ಇಲ್ಲಿಯ ಎಲ್ಲ ಮೂರ್ತಿ ಶಿಲ್ಪಗಳಲ್ಲಿಯೂ, ಅಗಲವಾದ ಮುಖ, ವಿಶಾಲವಾದ ಹಣೆ, ಬಾಗಿದ ಹುಬ್ಬುಗಳು, ದಪ್ಪ ತುಟಿಗಳು, ಮಾಂಸಲ ದವಡೆಗಳು ಮತ್ತು ಉಬ್ಬುಗಲ್ಲಗಳನ್ನು ಕಾಣುತ್ತೇವೆ. ಆಭರಣಗಳಲ್ಲಿ ಜಟಾಮಕುಟ, ಸರ್ಪಕುಂಡಲ, ಅಗಲವಾದ ಕಂಠವಾದ ಕಂಠಹಾರ, ಸಾದಾ ಅಥವಾ ಮುತ್ತುಗಳಿಂದ ಕೂಡಿದ ಯಜ್ಞೋಪವೀತ, ಉದರಬಂಧ (Belt), ಮೇಖಲ, ಕಟೀಬಂಧ, ಬಳೆಗಳು ಮತ್ತು ಕೇಯೂರ (ತೋಳ್ಬಂದಿ)ಗಳನ್ನು ಪ್ರಮುಖವಾಗಿ ಚಿತ್ರಿಸಲಾಗಿದೆ. ವಸ್ತ್ರವಿನ್ಯಾಸವು ತುಂಬ ಅಚ್ಚುಕಟ್ಟಾಗಿದ್ದು ಶಿವನ ಕೆಲವು ಶಿಲ್ಪಗಳಲ್ಲಿ ಹಾವನ್ನೇ ಕಟಿಬಂಧವಾಗಿ ತೋರಿಸಲಾದೆ.

ಕಲ್ಯಾಣದ ಚಾಲುಕ್ಯರು

ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟ ಅರಸ ಎರಡನೇ ಕರ್ಕನನ್ನು ಸಿಂಹಾಸನದಿಂದ ಪದಚ್ಯುತಗೊಳಿಸಿದ ಎರಡನೇ ತೈಲನು ದಖ್ಖನ್ನಿನಲ್ಲಿ ಚಾಲುಕ್ಯರ ಪರಮಾಧಿಕಾರವನ್ನು ಪುನಃ ಸ್ಥಾಪಿಸಿದನು. ಒಂದನೇ ಸೋಮೇಶ್ವರನು ಹಾಗೂ ಆತನ ಮಗನಾಗಿ ಆರನೇ ವಿಕ್ರಮಾದಿತ್ಯನು ಕಲ್ಯಾಣದ ಚಾಲುಕ್ಯರಲ್ಲಿ ಹೆಚ್ಚು ಪ್ರಖ್ಯಾತರು. ದಕ್ಷಿಣದಲ್ಲಿ ಅಧಿಪತ್ಯವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯುಳ್ಳ ಚೋಳರ ವಿರುದ್ಧವೂ, ನೆರೆಯವರಾದ ಹೊಯ್ಸಳರ ವಿರುದ್ಧವೂ ಈ ಇಬ್ಬರು ಚಾಲುಕ್ಯ ಅರಸರು ಸತತವಾಗಿ ಹೋರಾಡಬೇಕಾಗಿತ್ತು. ೧೧ನೇ ಮತ್ತು ೧೨ನೇ ಶತಮಾನದಲ್ಲಿ ಆಳಿದ ಈ ವಂಶಜ ರಾಜರು ಸಾಂಪ್ರದಾಯಿಕ ಹಾಗೂ ಅಲಂಕಾರಿಕ ಶಿಲ್ಪ ಕಲಾ ಶೈಲಿಯನ್ನೇ ಪ್ರೋತ್ಸಾಹಿಸಿದರು. ಸುರುಳಿಯಲಂಕಾರ ಮತ್ತು ಅತಿಯಾದ ಅಭರಣಧಾರಣ ಈ ಶೈಲಿಯ ಮುಖ್ಯ ಲಕ್ಷಣ. ವಿನ್ಯಾಸಗಳು ಸ್ಪಷ್ಟವಾಗಿದ್ದು ಜ್ಯಾಮಿತಿಯ ಆಕಾರಗಳಲ್ಲಿ ಅಥವಾ ಎಲೆಯಾಕಾರದ ಅಲಂಕಾರಗಳನ್ನು ಒಳಮಾಳಿಗೆಯಲ್ಲಿ, ಕಂಬಗಳಲ್ಲಿ, ಗೂಡುಗಳಲ್ಲಿ ಮತ್ತು ದ್ವಾರಗಳಲ್ಲಿ ವಾಸ್ತು ಮತ್ತು ಶಿಲ್ಪ ಕಲೆಗಳು ಸಂಪೂರ್ಣವಾಗಿ ಸಂಯೋಜಿತಗೊಂಡಿವೆ. ಆಭರಣಗಳು ಕಿರೀಟದಲ್ಲಿ, ಕುತ್ತಿಗೆಗಳಲ್ಲಿ ಅತಿ ಹೆಚ್ಚಾಗಿ ಕಾಣುತ್ತವೆ. ಯಜ್ಞೋಪವೀತವು ಸಂಪೂರ್ಣವಾಗಿ ಮುತ್ತುಗಳಿಂದ ಕೂಡಿರುತ್ತದೆ. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಕರ್ನಾಟಕದ ತುಂಬಾ ಅನೇಕ ದೇವಾಲಯಗಳನ್ನು ನಿರ್ಮಿಸಲಾಗಿದೆ ಬಾಗಲಿಯ ಕಲ್ಲೇಶ್ವರನ ಮಾಗಲದ ವೇಣುಗೋಪಾಲ ಸ್ವಾಮಿ, ಹಿರೇಹಡಗಲಿಯ ಕಟ್ಟೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ ಹಾಗೂ ಇನ್ನೂ ಕೆಲವು ದೇವಸ್ಥಾನಗಳು ಕರ್ನಾಟಕ ರಾಜ್ಯದ ತುಂಬಾ ಹರಡಿವೆ.

ಬಾಗಳಿಯ ದೇವಸ್ಥಾನದಲ್ಲಿ ನರಸಿಂಹ ಅಂಕಣವಿದ್ದು, ಅದರಲ್ಲಿ ಸಿಂಹಾಕಾರದ ಮನುಷ್ಯ ಹನ್ನೆರಡು ಕೈಗಳಿದ್ದು ಹಿರಣ್ಯಕಶ್ಯಪ ರಾಕ್ಷಸನ ಕರುಳುಗಳನ್ನು ಹರಿಯುತ್ತಿರುವುದನ್ನು ತೋರಿಸಲಾಗಿದೆ. ಇಂತಹ ದೃಶ್ಯದಲ್ಲಿ ಶಕ್ತಿ ಮತ್ತು ಚಲನೆ ಹೆಚ್ಚಾಗಿ ವ್ಯಕ್ತಪಡಿಸಬೇಕಾಗುತ್ತದೆ. ಆದರೆ ದೇವರ ಅವತಾರವಾದ ನರಸಿಂಹನು ತಾನು ಏನು ಮಾಡುತ್ತಿದ್ದೇವೆ ಎಂಬುದು ತನಗಿರಿವಿಲ್ಲದೆಯೇ ಮಾಡುತ್ತಿರುವುದಾಗಿ ಕಂಡುಬರುತ್ತದೆ. ಕಣ್ಣುಗಳಲ್ಲಿ ಜೀವ ಕಲೆಕಾಣಿಸುವುದಿಲ್ಲ. ಕೆಳಗೆ ಎರಡು ಕಡೆಗೆ ಭಕ್ತರು ನಿಂತಿರುವುದನ್ನು ಕಾಣುತ್ತೇವೆ.

ಮಾಗಳದ ವೇಣುಗೋಪಾಲ ಸ್ವಾಮಿ ದೇವಾಲಯ ಒಳಮಾಳಿಗೆಯು ಸ್ತುತವಾದ, ಅಲಂಕಾರಕ ನಕ್ಷೆಗಳನ್ನು ಹೊಂದಿದೆ. ಕಮಾನುಗಳಲ್ಲಿ ಸುರುಳಿಯಲಂಕಾರದ ರೇಖಾಚಿತ್ರಗಳನ್ನೂ, ಕಮಾನಿನ ಮಧ್ಯದಲ್ಲಿ ಕಮಲದ ಹೂವನ್ನು ಕೆತ್ತಲಾಗಿದೆ. ದೇವರ ವಿಗ್ರಹವು ಸಮಭಂಗ ಭಂಗಿಯಲ್ಲಿದ್ದು ಮೈಮೇಲೆ ಅನೇಕ ಆಭರಣಗಳನ್ನು ತೊಡಿಸಲಾಗಿದೆ. ಸುತ್ತಲೂ ಹೂಗಳ ಅಲಂಕಾರ ಪಟ್ಟಿಯಿಂದ ಶೃಂಗರಿಸಲಾಗಿದೆ. ಚಾಲುಕ್ಯರ ಕಾಲದ ಕಲಾಪ್ರೌಢಿಮೆಯನ್ನು ಈ ದೇವಾಲಯದ ಕೆತ್ತನೆಗಳು ಎತ್ತಿ ತೋರಿಸುತ್ತವೆ.

(ಮುಂದುವರಿದಿದೆ)

ಸುತ್ತಮುತ್ತ

## ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ

## ನಿಸ್ವಾರ್ಥ ಸೇವೆ ಹಾಗೂ ತ್ಯಾಗ ಮನೋಭಾವನೆಯಿಂದ ದುಡಿದಾಗ ಪ್ರಗತಿ ಸಾಧ್ಯ - ವಸಂತ ಹೆಗ್ಡೆ



ವಡಾಲ : ಭಾರತದಲ್ಲಿರುವ ಅನಕ್ಷರತೆ ಹಾಗೂ ಬಡತನದ ನಿವಾರಣೆಗೆ ಪಾಲಕರು ಹಾಗೂ ಶಿಕ್ಷಕರ ತ್ಯಾಗ ಮನೋಭಾವನೆ, ಸತತ ಪ್ರಯತ್ನ, ನಿಸ್ವಾರ್ಥ ಸೇವೆ ಮತ್ತು ಪ್ರಾಮಾಣಿಕ ದುಡಿಮೆಯಿಂದ ಭಾರತವು ಸಂಪೂರ್ಣ ಸಾಕ್ಷರ ಹಾಗೂ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸಾಧ್ಯ ಎಂದು ವಿಜಯಾ ಬ್ಯಾಂಕಿನ ಪಶ್ಚಿಮ ವಿಭಾಗದ ಉಪ ಮಹಾಪ್ರಬಂಧಕರಾದ ವಸಂತ ಕುಮಾರ್ ಹೆಗ್ಡೆಯವರು ತಿಳಿಸಿದರು.

ಅವರು ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಜರುಗಿದ 57ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರದ ಸಂದರ್ಭದಲ್ಲಿ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಿದ್ದರು.

ಇತರ ಶಾಲೆಗಳಂತೆ ಹೆಚ್ಚಿನ ಪ್ರತಿಶತ ಅಂಕ (Percentage) ಗಳನ್ನು ಗಣನೆಗೆ ತೆಗೆದುಕೊಳ್ಳದೆ ಕೇವಲ ಶೇಕಡಾ 35 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಶಾಲೆಗೆ ತೆಗೆದುಕೊಂಡು ಆ ವಿದ್ಯಾರ್ಥಿಗಳು ಶೇಕಡಾ 90ಕ್ಕೂ ಅಧಿಕ ಅಂಕಗಳನ್ನು ಗಳಿಸುವ ಸುದ್ದಿಯನ್ನು ಕೇಳಿ ನಿಜಕ್ಕೂ ರೋಮಾಂಚನಗೊಂಡೆನು. ಕನ್ನಡ ಮಾಧ್ಯಮದಲ್ಲಿ ಸತತ ದ್ವಿತೀಯ ವರ್ಷದಲ್ಲೂ ಶೇಕಡಾ 100 ಫಲಿತಾಂಶ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಶೇಕಡಾ 98 ಫಲಿತಾಂಶ ಬಂದಿರುವುದು ನಿಜಕ್ಕೂ ಶ್ಲಾಘನೀಯ ಎಂದ ಅವರು ಮುಂಬೈ ಮಹಾನಗರದಲ್ಲಿ ಅತ್ಯುತ್ತಮ ಶಾಲೆಯಾಗಿ ರೂಪುಗೊಳ್ಳಲು ಕಾರಣವಾದ ಅಧ್ಯಾಪಕರ ಕಠಿಣ ಪರಿಶ್ರಮ, ಪಾಲಕರ ಪ್ರಯತ್ನ ಹಾಗೂ ಶಾಲಾ ಕಾರ್ಯಕಾರಿ ಸಮಿತಿಯ ಕಾರ್ಯ ವೈಖರಿಗೆ ಮೆಚ್ಚುಗೆಯನ್ನು ಸೂಚಿಸಿದರು.

ಶಾಲಾ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಸ್. ಸುಬ್ರಮಣಿಯವರು ಮಾತನಾಡುತ್ತಾ ಯಾವುದೇ ಜಾತಿ, ಭಾಷೆ, ಧರ್ಮ ಎಂಬ ಭೇದಭಾವವನ್ನು ಮಾಡದೇ ವಿದ್ಯಾರ್ಥಿಗಳ ಹಿನ್ನೆಲೆ (back ground) ಹಾಗೂ ಗಳಿಸಿದ ಪ್ರತಿಶತ (Percentage) ಅಂಕಗಳನ್ನು ಗಣನೆಗೆ ತೆಗೆದುಕೊಳ್ಳದೆ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಕನ್ನಡದ ಕಡ್ಡಾಯದ ಕಲಿಕೆಯೊಂದಿಗೆ ಪ್ರತಿಯೊಬ್ಬರಿಗೂ ಮುಕ್ತವಾತಾವರಣದಲ್ಲಿ ಶಿಕ್ಷಣದ ಅವಕಾಶವನ್ನು ಕೊಡುವುದರೊಂದಿಗೆ ಶಿಕ್ಷಕರ ಪ್ರಯತ್ನ (Effort), ಪರ್ಯಾಯ ಬೋಧನೆ (Remedial teaching) ಹಾಗೂ ಹೆಚ್ಚುವರಿ ತರಭೇತಿಯ ತರಗತಿ (Extre Classess)ಗಳ ಮುಖಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ಎಂಬ ಧ್ಯೇಯದೊಂದಿಗೆ ಸತತ ವರ್ಷಗಳಲ್ಲಿ ಉತ್ತಮ ಫಲಿತಾಂಶ ಗಳಿಸಲು ಕಾರಣವಾಗಿದೆ ಎಂತು ತಿಳಿಸುತ್ತಾ ಎಸ್.ಎಸ್.ಸಿ.ಯಲ್ಲಿ ಪ್ರತಿ ವಿಷಯದಲ್ಲಿ ಪ್ರಥಮ ಸ್ಥಾನಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರದ ಮುಖಾಂತರ ಪ್ರೋತ್ಸಾಹಿಸುತ್ತಿರುವ ಮಹಾನೀಯರಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಶಿಕ್ಷಕಿ ಶ್ರೀಮತಿ ರಾಖಿ ಮೋರೆಯವರು ಮಾತನಾಡುತ್ತಾ ದೇಶವು ಹಿಂದಿನ ಘನತೆ, ಗೌರವಗಳನ್ನು ಪಡೆಯಲು ಸಾಮಾಜಿಕ, ನೈತಿಕ ಹಾಗೂ ಸಾಂಸ್ಕೃತಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದಾಗ ನಾವು ಪ್ರಗತಿ ಪಥದತ್ತ ಸಾಗಲು ಸಾಧ್ಯವಿದೆ. ರಕ್ಷಣೆ ಮತ್ತು ತಂತ್ರಜ್ಞಾನ ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ನಮ್ಮ ದೇಶದ ಶಾಂತತೆಗೆ ಭಂಗತರುವ ಅಹಿತಕರ ಘಟನೆಗಳು ನಮ್ಮನ್ನು ಇನ್ನಷ್ಟು ಒಗ್ಗಟ್ಟಾಗಲು ಪ್ರೇರೇಪಿಸುತ್ತದೆ. ಪ್ರಜ್ಞಾವಂತ ನಾಗರಿಕರ ನಿರ್ಮಾಣಕ್ಕೆ ಶಿಕ್ಷಣದ ಅಗತ್ಯತೆಯನ್ನು ಸೋದಾಹರಣವಾಗಿ ತಿಳಿಸಿದರು.

ಆದರ್ಶ ಶೆಟ್ಟಿಗಾರ್ ತನ್ನ ಶಾಲಾ ಅನುಭವಗಳನ್ನು ತಿಳಿಸುತ್ತಾ ಪ್ರಸ್ತುತ ಎಸ್.ಎಸ್.ಸಿ.ಯಲ್ಲಿ ಶೇಕಡಾ 91ಕ್ಕೂ ಅಧಿಕ ಅಂಕಗಳನ್ನು ಪಡೆಯಲು ಕಾರಣರಾದ ಶಿಕ್ಷಕರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ಪ್ರತಿಯೊಬ್ಬ ವಿದ್ಯಾರ್ಥಿಗಳು ತನ್ನಂತೆ ಕಠಿಣ ದುಡಿಮೆ, ತಮ್ಮ ಮೇಲೆ ಭರವಸೆ (ಆತ್ಮ ವಿಶ್ವಾಸ) (Self Confidence) ಯನ್ನಿಟ್ಟು ಹಾಗೂ ಅಭ್ಯಾಸದಲ್ಲಿ ನಿರ್ದಿಷ್ಟವಾದ ಯೋಜನೆಗಳನ್ನು ಹಾಕಿಕೊಂಡಾಗ ಹೆಚ್ಚಿನ ಅಂಕಗಳನ್ನು ಗಳಿಸಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಅರುಹಿದರು.

ಕಾರ್ಯಕ್ರಮವು ಬೆಳಿಗ್ಗೆ 9.00 ಗಂಟೆಗೆ ಧ್ವಜಾರೋಹಣದಿಂದ ಆರಂಭಗೊಂಡು ತದನಂತರ ಶಿಕ್ಷಕ ಅಮರೀಶ ಪಾಟೀಲ ಹಾಗೂ ಶಿಕ್ಷಕಿ ಶ್ರೀಮತಿ ಕಾಂಚನ್ ಕೋಷ್ಟಿಯವರ ಮಾರ್ಗದರ್ಶನದಲ್ಲಿ NCC ಹಾಗೂ MCC ವಿದ್ಯಾರ್ಥಿಗಳು ಆಕರ್ಷಕ ಕವಾಯತು ಹಾಗೂ ಮುಖ್ಯ ಅತಿಥಿಗಳಿಗೆ ಗೌರವ ರಕ್ಷೆಯನ್ನಿತ್ತರು. ವಿದ್ಯಾರ್ಥಿಗಳ ಪ್ರತಿಜ್ಞಾ ಸ್ವೀಕಾರದೊಂದಿಗೆ ಕಾರ್ಯಕ್ರಮವು ಪ್ರಾರಂಭಗೊಂಡಿತು.

ಸಭಾ ಕಾರ್ಯಕ್ರಮವು ವಿದ್ಯಾರ್ಥಿಗಳ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಆಗಮಿಸಿದ ಅಭ್ಯಾಗತರನ್ನು ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜರಾವ್‌ರವರು ಸ್ವಾಗತಿಸಿದರೆ ಶಾಲಾ ಪರಿವೀಕ್ಷಕಿ ಶ್ರೀಮತಿ ಲತಾ ಭಂಡಾರಿಯವರು ಪ್ರಸ್ತಾವನೆಗೈದರು. 2002-03 ಶೈಕ್ಷಣಿಕ ವರ್ಷದ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ 45 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ತಮ್ಮ ವಿಷಯದಲ್ಲಿ ಶೇಕಡಾ 100 ಫಲಿತಾಂಶ ತಂದ ಶಿಕ್ಷಕರಿಗೆ ಶಾಲಾ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾದ ಡಾ|| ಬಿ.ಆರ್. ಮಂಜುನಾಥ್‌ರವರು ಹಾಗೂ ಶಾಲಾ ಕಾರ್ಯಕಾರಿ ಸಮಿತಿಯವರು ಕೊಡಮಾಡಿದ ತಲಾ ರೂಪಾಯಿ 1000 (ಒಂದು ಸಾವಿರ) ನಗದು ಬಹುಮಾನ ನೀಡಿ ಗೌರವಿಸಲಾಯಿತು. ಹಾಗೂ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮದಲ್ಲಿ ಈ ಕೆಳಗಿನ ವಿಷಯಗಳಲ್ಲಿ ಅತ್ಯಂತ ಹೆಚ್ಚಿನ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಮುಖ್ಯವಾಗಿ ಶಾಲಾ ಮಾಜಿ ಪರಿವೀಕ್ಷಕಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯೆಯಾದ ಶ್ರೀಮತಿ ದೇಶಪಾಂಡೆ ಇಂಗ್ಲಿಷ್ ಹಾಗೂ ಸಾಮಾಜಿಕ ವಿಜ್ಞಾನ (Social Sicence) ವಿಷಯಕ್ಕೆ ತಲಾ (5000) (ಐದುಸಾವಿರ)ದಂತೆ ಶಾಲಾ ನಿವೃತ್ತ ಶಿಕ್ಷಕ ಶ್ರೀ ಜೆರೋಮ್ ಡಿಸೋಜ ಗಣಿತ ವಿಷಯಕ್ಕೆ ತಲಾ 500 (ಐನೂರು)ರಂತೆ ವಿಜಯ ಬ್ಯಾಂಕ್ ವಡಾಲ ಶಾಖೆಯ ವತಿಯಿಂದ ಪ್ರತಿ ವಿಷಯಕ್ಕೆ ತಲಾ 500 (ಐನೂರು)ರಂತೆ ವಿಜಯಬ್ಯಾಂಕ್ ವಡಾಲ ಶಾಖೆಯ ವತಿಯಿಂದ ಪ್ರತಿ ವಿಷಯಕ್ಕೆ ತಲಾ 500 (ಐನೂರು)ರಂತೆ ಹಾಗೂ ತೆರಿಗೆ ಮಾಹಿತಿದಾರ ಶ್ರೀ ವಿಜಯ ಪಾಟೀಲರು ಅತ್ಯಧಿಕ

ಅಂಕ ಪಡೆದ ಇದು ವಿದ್ಯಾರ್ಥಿನಿಯರಿಗೆ ತಲಾ 2000 (ಎರಡು ಸಾವಿರ)ದಂತೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಿದರು.

ಈ ಪುರಸ್ಕಾರದ ವಿಜೇತರ ಹೆಸರನ್ನು ಶಾಲಾ ಉಪ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಲ್.ಬಿ. ಮೋನಿಸ್‌ರವರು ಓದಿದರೆ ವಿಜಯಾ ಬ್ಯಾಂಕ್ ವಡಾಲ ಶಾಖೆಯ ಪ್ರಬಂಧಕರಾದ ಜಗದೀಶ ಶೆಟ್ಟಿ, ಶಾಲಾ ಕಾರ್ಯಕಾರಿ ಸಮಿತಿಯ ಕೋಶಾಧಿಕಾರಿ ಕೆ.ಎನ್. ಕೀರ್ತಿ ಹಾಗೂ ಸದಸ್ಯರಾದ ಶ್ರೀಮತಿ ದೇಶಪಾಂಡೆ ಹಾಗೂ ಸುರೇಶ್‌ರವರು ನೀಡಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಯಾಸಿನ್ ಆಲಿ ಸಯಾಲಿಯವರು ತಮ್ಮ ಮಗನ ಫಲಿತಾಂಶದಿಂದ ಆನಂದಗೊಂಡು ರೂಪಾಯಿ 26000 (ಇಪ್ಪತ್ತಾರು ಸಾವಿರ) ಬೆಲೆ ಬಾಳುವ ಎ.ಸಿ. (Air-condition)ಯನ್ನು ಶಾಲೆಗೆ ದೇಣಿಗೆಯಾಗಿ ನೀಡಿದರು. ಶಿಕ್ಷಕಿ ಶಶಿಮತಿ ಸವಿತಾ ನಾಗಾನಂದರು ಕಾರ್ಯಕ್ರಮ ನಿರ್ವಹಿಸಿ ಕೊನೆಯಲ್ಲಿ ವಂದಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ವರದಿ : ಪ್ರಕಾಶ್ಚಂದ್ರ ಎಂ.ಆರ್.

## ಭಾರತವು ಹಲವು ಭಾಷೆಗಳ ಭಂಡಾರ

**- ಎಂ. ಬಿ. ಕುಕ್ಯಾನ್**

"ಭಾರತವು ವಿವಿಧ ಸಂಸ್ಕೃತಿಗಳ, ಭಾಷೆಗಳ ಭಂಡಾರವಾಗಿದೆ. ಒಂದು ಭಾಷೆ ಇನ್ನೊಂದು ಭಾಷೆಯ ಸಂಪರ್ಕವಾದಾಗ ಜೀವನವಿಕಾಸವಾಗುತ್ತದೆ" ಎಂದು ಖ್ಯಾತ ಸಾಹಿತಿ ಹಾಗೂ ಅಕ್ಷಯ ಮಾಸಿಕದ ಸಂಪಾದಕರಾದ ಎಂ. ಬಿ. ಕುಕ್ಯಾನ್‌ರವರು ಮುಂಬಯಿ ಕನ್ನಡ ಸಂಘದವರು ಆಯೋಜಿಸಿದ್ದ ಕನ್ನಡ ಸರ್ಟಿಫಿಕೇಟ್ ಕೋರ್ಸ್ ತರಗತಿಗಳನ್ನು ಉದ್ಘಾಟಿಸುತ್ತಾ ನುಡಿದರು. ಅವರು ಮುಂದುವರೆದು ಹೊರನಾಡಿನಲ್ಲಿರುವ ನಾವು ಕೇವಲ ಕನ್ನಡಕ್ಕಾಗಿ ದುಡಿಯದೇ ಸ್ಥಳೀಯ ಜತೆ ಸೌಹಾರ್ದತೆಯಿಂದ ಬಾಳಬೇಕೆಂದೂ, ಈ ನಿಟ್ಟಿನಲ್ಲಿ ಕನ್ನಡ ಸಂಘವು ಮರಾಠಿ ಕಲಿಕೆಯನ್ನೂ ಪ್ರಾರಂಭಿಸಬೇಕೆಂದು ಸಲಹೆಕೊಟ್ಟರು. ಕಳೆದ 67 ವರ್ಷಗಳಿಂದಲೂ ತನ್ನದೇ ಆದ ರೀತಿಯಲ್ಲಿ ಕನ್ನಡಕ್ಕೆ ಉತ್ತಮ ಸೇವೆ ಸಲ್ಲಿಸುತ್ತಿರುವ ಮುಂಬಯಿ ಕನ್ನಡ ಸಂಘದ ಸೇವೆಯನ್ನು ಪ್ರಶಂಸಿಸಿ, ಯಶಸ್ಸನ್ನು ಹಾರೈಸಿದರು.

ಈ ಸಂದರ್ಭದಲ್ಲಿ ಕಳೆದ ವರ್ಷ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರಗಳನ್ನು ವಿತರಣೆ ಮಾಡಲಾಯಿತು.

## ಮುಂಬಯಿ ಕನ್ನಡ ಸಂಘದ ವಾರ್ಷಿಕ ಮಹಾಸಭೆ

ಮಾತುಂಗದಲ್ಲಿರುವ ಮುಂಬಯಿ ಕನ್ನಡ ಸಂಘದ 63ನೇ ವಾರ್ಷಿಕ ಮಹಾಸಭೆಯು ದಿನಾಂಕ 9-8-2003ರಂದು ಸಂಘದ ಅಧ್ಯಕ್ಷರಾದ ಜಿ.ಎಸ್. ನಾಯಕ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಆರಂಭದಲ್ಲಿ ಅಧ್ಯಕ್ಷರು ಎಲ್ಲರನ್ನು ಸ್ವಾಗತಿಸಿದರು. 2003-2004ನೇ ಸಾಲಿನ ಲೆಕ್ಕ ಪರಿಶೋಧಕರಾಗಿ ನೇಮಕ ಮಾಡಿಕೊಳ್ಳಲಾಯಿತು. ಮೆ! ಸುರೇಶ ರಾವ್ ಮತ್ತು ಕಂಪೆನಿಯನ್ನು (ಚಾರ್ಟರ್ಡ್ ಅಕೌಂಟೆಂಟ್ಸ್) 2003-2004ನೇ ಸಾಲಿನ ಲೆಕ್ಕ ಪರಿಶೋಧಕರಾಗಿ ನೇಮಕ ಮಾಡಿಕೊಳ್ಳಲಾಯಿತು. ನಂತರ 2003-2005ನೇ ಸಾಲಿಗೆ ಹೊಸ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು. ವಾರ್ಷಿಕ ಮಹಾಸಭೆಯ ಕಾರ್ಯಕಲಾಪಗಳು ಸುಗಮವಾಗಿ ನಡೆದುವು. ಹಿರಿಯ ಸದಸ್ಯರುಗಳಾದ ಸಿ.ಕೆ. ಶಂಕರನಾರಾಯಣ ರಾವ್ ಮತ್ತು ಕೆ.ಎಸ್. ಸರಳಾಯರವರು ಉಪಸ್ಥಿತರಿದ್ದು, ಸಂಘವು ಕಳೆದ ವರ್ಷದ ಅವಧಿಯಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಆಯೋಜನೆ, ಸಾಕಷ್ಟು ಪ್ರಗತಿ ಸಾಧಿಸಿದೆಯೆಂದು ತಿಳಿಸಿ, ಕಾರ್ಯಕಾರೀ ಸಮಿತಿಯನ್ನು ಅಭಿನಂದಿಸಿದರು. ಗೌ.ಪ್ರ. ಕಾರ್ಯದರ್ಶಿ ಬಿ. ನಾಗಭೂಷಣ್ ವಂದಿಸಿದರು.

## "ಕನ್ನಡ ರಂಗಭೂಮಿ ಹೊಸ ವಿನ್ಯಾಸ ಹುಡುಕಿಕೊಳ್ಳಬೇಕಾಗಿದೆ"

**- ಬರಗೂರು ರಾಮಚಂದ್ರಪ್ಪ**

"ಕನ್ನಡ ರಂಗಭೂಮಿ ಹೊಸ ವಸ್ತು ಹೊಸ ವಿನ್ಯಾಸಗಳನ್ನು ಹುಡುಕಿಕೊಳ್ಳಬೇಕಾಗಿದೆ. ರಂಗಭೂಮಿಯನ್ನು ಸಾಂಸ್ಕೃತಿಕ ಶಿಕ್ಷಣವನ್ನಾಗಿ ಪರಿವರ್ತಿತಗೊಳಿಸಬೇಕು. ಈ ದೇಶದ ಅನೇಕ ಹುಸಿ ಸಂಸ್ಕೃತಿ ಸವಾಲುಗಳಿಗೆ ಸಾಂಸ್ಕೃತಿಕವಾಗಿ ಉತ್ತರ ಕೊಡಬೇಕಾಗಿದೆ. ಹೊಸ ಪುರಾಣಗಳನ್ನು ಹುಡುಕಿಕೊಳ್ಳಬೇಕಾಗಿದೆ. ಪುರಾಣಗಳನ್ನು ನಿಜಸ್ಥಿತಿಯಲ್ಲಿ ಅಧ್ಯಯನ ಮಾಡುವ ಮನೋಧರ್ಮ ಬೆಳೆಯಬೇಕು. ಜನತೆಯ ಪುರಾಣಗಳು ರಂಗಭೂಮಿಯಲ್ಲಿ ಬರಬೇಕು" ಎಂದು ಕನ್ನಡದ ಖ್ಯಾತ ಸಾಹಿತಿ ಪ್ರೊ| ಬರಗೂರು ರಾಮಚಂದ್ರಪ್ಪರವರು ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಸಂಘ ಆಯೋಜಿಸಿದ ಸದಾನಂದ ಸುವರ್ಣರ ದತ್ತಿ ಉಪನ್ಯಾಸದ ಅಂಗವಾಗಿ "ಕನ್ನಡ ರಂಗಭೂಮಿ - ಸವಾಲುಗಳು" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುತ್ತಿದ್ದರು.

ವೃತ್ತಿ ರಂಗಭೂಮಿ ಉತ್ತರ ಕರ್ನಾಟಕದಲ್ಲಿ ಜನಾಶ್ರಯದಿಂದ ದಕ್ಷಿಣ ಕರ್ನಾಟಕದಲ್ಲಿ ರಾಜಾಶ್ರಯದಿಂದ ಬೆಳೆಯಿತು. ಬುಡಕಟ್ಟು ಜನಾಂಗದ, ದೊಂಬಿದಾಸರ ಆಟ, ಹಗಲು ವೇಷ ಮುಂತಾದವು ವೃತ್ತಿ ರಂಗಭೂಮಿಯೇ ಆಗಿದೆ. ಕುಲ, ಕಸುಬು, ಕಲೆ ಈ ಮೂರಕ್ಕೂ ಸಂಬಂಧವಿದೆ. ವೃತ್ತಿ ರಂಗಭೂಮಿ ವಿದೇಶಿ ಮಾಧ್ಯಮಗಳ ಆವಿಷ್ಕಾರದಿಂದ ರಂಗಭೂಮಿ ಹೊಸ ಸವಾಲನ್ನು ಎದುರಿಸಿತು. ರಂಗಭೂಮಿ ಬದುಕುವುದು ಕಷ್ಟವಾಯಿತು. ಮಾಧ್ಯಮದ ಹೊಡೆತದಿಂದಾಗಿ ಕಲಾತ್ಮಕತೆಗೆ ಗಮನ ಕಡಿಮೆಯಾಗಿ ಅಭಿರುಚಿಯನ್ನು ಅಡವಿಡಬೇಕಾಯಿತು. ಕಲಾತ್ಮಕ, ಅನನ್ಯತೆ, ಅವನತಿಯ ಕಡೆಗೆ ಸಾಗಬೇಕಾಯಿತು.

ಸಾಂಸ್ಕೃತಿಕವಾಗಿ ಪರ್ಯಾಯ ಹುಡುಕಬೇಕಾದ ಜವಾಬ್ದಾರಿ ರಂಗಭೂಮಿಗೆ ಇದೆ. ಹೊಸ ರೀತಿಯ ನಿರ್ವಹಣೆಯ ಸವಾಲು ಇಂದಿನ ರಂಗಭೂಮಿಗೆ ಇದೆ. ಪರ್ಯಾಯ ಆಕೃತಿಯನ್ನು ಹುಡುಕುವ ಜನರಂಗ ಭೂಮಿಯ ಅಗತ್ಯವಿದೆ ಎಂದು ಬರಗೂರರು ಕನ್ನಡ ರಂಗಭೂಮಿಯನ್ನು ಸವಿಸ್ತಾರವಾಗಿ ಅವಲೋಕಿಸುತ್ತಾ ರಂಗಭೂಮಿಯ ಸವಾಲುಗಳನ್ನು ರಂಗಾಸಕ್ತರ ಮುಂದಿಟ್ಟರು.

ಸಂಘದ ಗೌರವ ಕಾರ್ಯದರ್ಶಿ ಭರತ್‌ಕುಮಾರ್ ಪೊಲಿಪುರವರು ಕಾರ್ಯಕ್ರಮವನ್ನು ನಿರೂಪಿಸಿದರು.

**ಕನ್ನಡ ಸಂಘ, ಕೆ.ಜೆ. ಸೋಮೈಯ್ಯಾ ಕಾಲೇಜು**

ವಿದ್ಯಾವಂತನಲ್ಲಿ ಮನುಷ್ಯತ್ವವಿರಬೇಕು; ಜ್ಞಾನ ಬೆಳಕಿನಲ್ಲಿ ದೌರ್ಬಲ್ಯಗಳನ್ನು ನಿವಾರಿಸಬೇಕು. ವಿದ್ಯೆಯಿಂದ ನಾವು ಪುನೀತರಾಗಬೇಕು. ಬಡವಿದ್ಯಾರ್ಥಿಗಳಿಗೆ ಪೋಷಕರಾಗುವುದು ಪುಣ್ಯದ ಕೆಲಸವಾಗಿದೆ. ಬಡತನ ನಿರ್ಮೂಲನಕ್ಕೆ ಶಿಕ್ಷಣ ಪ್ರಮುಖ ಸಾಧನವಾಗಿದೆ. ವಿದ್ಯಾರ್ಥಿಗಳು ಪ್ರತಿಭಾ ಪ್ರದರ್ಶನದಂತಹ ಕೆಲಸದಲ್ಲಿ ಕ್ರಿಯಾಶೀಲರಾಗಬೇಕು. ಕನ್ನಡ ಸಂಸ್ಕೃತಿ ಶಿಕ್ಷಣ ಭಾಷೆಯನ್ನು ನಾವೆಲ್ಲರೂ ಕೂಡಿ ರಕ್ಷಿಸೋಣವೆಂದು ಜರಿಮೆರಿಯ ತುಳುನಾಡ ಸಂಘದ ಅಧ್ಯಕ್ಷರು 'ಸತ್ಯಾವಿಜಯ' ಹಿಂದಿ ಮಾಸಿಕದ ಸಂಪಾದಕರಾದ ಸಾಣೂರು ವಿಜಯ ಶೆಟ್ಟಿ ಅವರು ಘೋಷಿಸಿದರು. ವಿಜಯ ಶೆಟ್ಟಿಯವರು ಸೋಮೈಯ್ಯಾ ಕಾಲೇಜು ಕನ್ನಡ ಸಂಘದ ಈ ವರ್ಷದ ಶೈಕ್ಷಣಿಕ ವರ್ಷದ ಚಟುವಟಿಕೆಗಳ ಹಾಗೂ ಅಂತರಶಾಲಾ ಕನ್ನಡ ಸಮೂಹ ಗಾಯನ ಸ್ಪರ್ಧೆಯ ಉದ್ಘಾಟಕರಾಗಿ ಮಾಡುತ್ತಾ ಹೇಳಿದರು.

ಥಾನೆಯ ಅಂಬಾ ಪ್ಯಾಲೇಸಿನ ಮಾಲಕ, ಥಾಣೆ ಜಿಲ್ಲೆಯ ಹೊಟೇಲ್ ಓನರ್ಸ್ ಎಸೋಸಿಯೇಶನ್‌ನ ಜತೆಕಾರ್ಯದರ್ಶಿ ಪಳ್ಳಿ ರಮೇಶ್ ಶೆಟ್ಟಿ ಅವರು ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

ಥಾನೆಯ ಸುರುಭಿ ಹೋಟೇಲಿನ ಮಾಲಕರೂ ಕನ್ನಡ ಪ್ರಚಾರ ಸಮಿತಿಯ ಪೋಷಕರಾದ ರವೀಂದ್ರ ಎಸ್. ಶೆಟ್ಟಿಯವರೂ ಮತ್ತೊಬ್ಬ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## ಸಂಗೀತ ವಿದ್ಯಾಲಯದ ಸಾಧನೆ

ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದವರು ಪ್ರತಿವರ್ಷ ಕರ್ನಾಟಕ ಸಂಗೀತ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ಕಳುಹಿಸುತ್ತಿದ್ದು ಉತ್ತಮ ಫಲಿತಾಂಶವನ್ನು ಪಡೆಯುತ್ತಿದೆ. ಈ ವರ್ಷ ಮೇ 2003ರಲ್ಲಿ ನಡೆದ ಸಂಗೀತ ಪರೀಕ್ಷೆಗಳ ಫಲಿತಾಂಶ ಹೊರಬಿದ್ದು ವಿದ್ಯಾಲಯದ ಅಭ್ಯರ್ಥಿಗಳು ಉತ್ತಮ

Regn. No. 040155/63
Regn. No.-TECH/47-202/MBI-2002
Date of Posting : 10-9-2003

*(Contd. from pg. 6)*



*The team of sculptors pose in front of the mural produced at the workshop with the chief guest Sabannavar, Neelakantachar and Marishamachar. From R to L are : Gopal Kammar, Shiv Kumar, Venkatchalapathi, Vinaya Hegde, Shivdutt, Tulasiram, Raghavendra Hegde, Nagendra Rao, Husaini*

takes a couple of days to dry completely. Once it is fully dry, a coat of lacquer is given to the entire mural as a protective coat.

---

ಶ್ರೇಯಾಂಕದೊಂದಿಗೆ ತೇರ್ಗಡೆಯಾಗಿದ್ದಾರೆಂದು ಪ್ರಕಟಣೆ ತಿಳಿಸುತ್ತದೆ.

**ತೇರ್ಗಡೆಯಾದ ಅಭ್ಯರ್ಗಳ ವಿವರಗಳು**

ಜೂನಿಯರ್ ಪರೀಕ್ಷೆಗಳು : ಕುಮಾರಿ ಗೋಮತಿ (ಹಾಡಿಗಾರಿಕೆ) - 85%, ಕುಮಾರಿ ಅರ್ಚನಾ (ವೀಣೆ) - 78%, ಕುಮಾರಿ ಮಹಾಲಕ್ಷ್ಮೀ (ವೀಣೆ) -77%

ಸೀನಿಯರ್ ಪರೀಕ್ಷೆ : ಕುಮಾರಿ ಅರುಣ (ಹಾಡಿಗಾರಿಕೆ) - 86%

ಇದುವರೆಗೆ ವಿದ್ಯಾಲಯವು 105 ಜೂನಿಯರ್, 11 ಸೀನಿಯರ್ ಮತ್ತು 3 ವಿದ್ವತ್ ವಿಭಾಗದ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳನ್ನು ತೇರ್ಗಡೆ ಮಾಡಿದ ಕೀರ್ತಿಯನ್ನು ಪಡೆದಿದೆ.

## ಜ್ಞಾನ, ಭಕ್ತಿ, ವೈರಾಗ್ಯಗಳೇ ನಿಜವಾದ ಸಂಪತ್ತು

**- ಶ್ರೀ ಮಧ್ವಾಚಾರ್ಯ ಜೋಶಿ, ಅಥಣಿ**

ಮಹಾತ್ಮರ ಪುಣ್ಯ ಸ್ಮರಣೆಯೇ ನಿಜವಾದ ಆರಾಧನೆ, ಜ್ಞಾನ ಭಕ್ತಿ ವೈರಾಗ್ಯಗಳೇ ನಿಜವಾದ ಸಂಪತ್ತು, ತಮ್ಮ ತಪಸ್ಸಿನಿಂದ ಜ್ಞಾನವನ್ನು ಸಂಪಾದಿಸಿ, ಜನರಲ್ಲಿ ಭಕ್ತಿ ಮಾರ್ಗವನ್ನು ಭೋದಿಸಿ, ಐಹಿಕ ಸುಖಗಳನ್ನು ತ್ಯಜಿಸಿ, ವೈರಾಗ್ಯ ಜೀವನದಿಂದ ಲೋಕ ಕಲ್ಯಾಣವನ್ನುಂಟು ಮಾಡಿದ ಶ್ರೀ ಗುರುರಾಘವೇಂದ್ರ ಸ್ವಾಮಿಗಳು ಮಂತ್ರಾಲಯದಲ್ಲಿ ಬೃಂದಾವನಸ್ಥರಾಗಿ ಭಕ್ತಿಯಿಂದ ನೀಡಿದವರಿಗೆ ಇಷ್ಟಾರ್ಥಗಳನ್ನು ನೀಡುತ್ತಾ ಕಾಮಧೇನು, ಕಲ್ಪವೃಕ್ಷವಾಗಿ ರಾರಾಜಿಸುತ್ತಿದ್ದಾರೆ. ಇಂತಹ ಮಹಾನುಬಾವರ ಕೇವಲ ಪುಣ್ಯ ಸ್ಮರಣೆಯಿಂದ ಜೀವನಪಾವನವಾಗುವುದು'' ಎಂದು ಉತ್ತರಾಧಿ ಮಠದ ಶ್ರೀ ಸತ್ಯಪ್ರಮೋದ ಶಿಷ್ಯರಲ್ಲೊಬ್ಬರಾದ ಶ್ರೀ ಮಾಧ್ವಾಚಾರ್ಯ ಜೋಶಿ ಅಥಣೆಯವರು ಶ್ರೀ ಗುರುರಾಘವೇಂದ್ರ ಸೇವಾ ಸಮಿತಿಯವರೂ ಡೊಂಬಿವಲಿಯಲ್ಲಿ ಏರ್ಪಡಿಸಿದ್ದ ಶ್ರೀ ಗುರುರಾಘವೇಂದ್ರ ಸ್ವಾಮಿಗಳ ಪೂರ್ವಾರಾಧನಾ ಮಹೋತ್ಸವದಲ್ಲಿ ಪ್ರವಚನ ಮಾಡುತ್ತಾ ತಿಳಿಸಿದರು.

ಶ್ರೀ ಆಚಾರ್ಯರು ಮುಂದುವರೆದು ಶ್ರೀ ರಾಘವೇಂದ್ರರ ಚರಿತ್ರೆ, ಮಹಿಮೆ ಮತ್ತು ಅವರ ಪುಣ್ಯ ಸ್ಮರಣೆಯ ಫಲಗಳನ್ನು ಸವಿಸ್ತಾರವಾಗಿ ತಿಳಿಸಿ ಶ್ರೀ ರಾಘವೇಂದ್ರರ ಕೃತಿಗಳನ್ನು ಗಾಯನಮಾಡಿ ಅದರಭಾವಾರ್ಥವನ್ನು ತಿಳಿಸಿದರು.

ಆಚಾರ್ಯ ಶ್ರೀ ರಕ್ಷೋತ್ತಮಾಚಾರ್ಯ ವ್ಯಕಾಶಿಯವರು ಮಾತನಾಡಿ, ಸುಪ್ರಸಿದ್ಧ ಪಂಡಿತರುಗಳೂ, ವಿದ್ವಾಂಸರುಗಳು ಹಾಗೂ ಭಾಷ್ಯಕಾರರು ಶ್ರೀ ಗುರುರಾಯರ ಬಗ್ಗೆ ತಿಳಿಸಿರುವ ಮಾಹಿತಿಯನ್ನು ಪ್ರಭಾವಪೂರ್ಣವಾಗಿ ವರ್ಣಿಸಿ ಭಕ್ತಾದಿಗಳ ಕುತೂಹಲವನ್ನು ಹೆಚ್ಚಿಸಿದರು.

ಆರಾಧನಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮಗಳಲ್ಲಿ ಮುಂಜಾನೆ ಪೂಜೆ, ಅಭಿಷೇಕ, ಅಷ್ಟೋತ್ತರ ಪಾರಾಯಣ, ತೀರ್ಥ ಪ್ರಸಾದಗಳು ನಡೆದುವು. ಸಂಗೀತ ಸೇವೆಯ ಅಂಗವಾಗಿ ಶ್ರೀಮತಿ ಅಜು ಬೆಳವಾಡಿಯವರಿಂದ ಶ್ರೀ ಗುರುರಾಯರ ಮೇಲಿನ ಭಕ್ತಿ ಸಂಗೀತ ನಡೆಯಿತು.

## ಮನೆಮನೆಯಲ್ಲಿ ಸಾಹಿತ್ಯ ಸ್ಪಂದನ ಕಾರ್ಯಕ್ರಮ

ಕನ್ನಡ ಸಾಹಿತ್ಯ ಪರಿಷತ್ತಿನ ಮಹಾರಾಷ್ಟ್ರ ಘಟಕವು ಶನಿವಾರ 5-7-2003ರಂದು ಸಂಜೆ 4.30ಕ್ಕೆ ದಹಿಸರ್ (ಪೂ)ದಲ್ಲಿ ವಾಸಿಸುವ ಶ್ರೀಮತಿ ಜಯಲಕ್ಷ್ಮಿ ಪಾಟೀಲ ಅವರ ಮನೆಯಲ್ಲಿ 'ಸಾಹಿತ್ಯ ಸ್ಪಂದನ ' ಕಾರ್ಯಕ್ರಮ ಏರ್ಪಡಿಸಿತ್ತು. ಮುಂಬಯಿ ಹಾಗೂ ಠಾಣೆ ಜಿಲ್ಲೆಯ ಹಿರಿ-ಕಿರಿಯ ಸಾಹಿತಿಗಳು ಬಹಳ ಆಸಕ್ತಿಯಿಂದ ಬಂದು ಪಾಲ್ಗೊಂಡಿದ್ದರು.

ಶ್ರೀಮತಿ ಗಾಯತ್ರಿ ರಾಮು, ಶ್ರೀ ಎಲ್. ಬಿ. ದೇಸಾಯಿ, ಶ್ರೀ ಅವಿನಾಶ್ ಕಾಮತ್, ಶ್ರೀ ಸುರೇಂದ್ರ ಕುಮಾರ್, ಶ್ರೀಮತಿ ಅಕ್ಷತಾ ದೇಶಪಾಂಡೆ, ಶ್ರೀಮತಿ ಪದ್ಮಜಾ ಮಣ್ಣೂರ, ಶ್ರೀಮತಿ ಜಯಲಕ್ಷ್ಮಿ ಪಾಟೀಲ, ಡಾ. ಶಕುಂತಲಾ ಪಾಟೀಲ, ಶ್ರೀಮತಿ ತುಳಸಿ ವೇಣುಗೋಪಾಲ್, ಡಾ. ಕರುಣಾಕರ್ ಶೆಟ್ಟಿ, ಶ್ರೀಮತಿ ಮಿತ್ರಾ ವೆಂಕಟರಾಜ್ ಮುಂತಾದ ಸಾಹಿತಿಗಳು ಭಾಗವಹಿಸಿ ಕವನ,ಮಿನಿಕಥೆ, ಕಥೆ, ಲೇಖನ, ನಾಟಕ, ಸ್ವಾನುಭವ, ಸತ್ಯಘಟನೆ ಮುಂತಾದ ವಿವಿಧ ಪ್ರಕಾರಗಳ ಸಾಹಿತ್ಯವನ್ನು ಪ್ರಸ್ತುತ ಪಡೆಸಿದರು. ಇದಕ್ಕೆ ಸ್ಪಂದಿಸಿದವರಲ್ಲಿ ಶ್ರೀ ಬಾಲಕೃಷ್ಣ ನಿಡ್ವಣ್ಣಾಯ, ಡಾ. ಸುನೀತಿ ಉದ್ಯಾವರ, ಶ್ರೀಮತಿ ಸುಮಾ, ಶ್ರೀ ರಂಗನಾಥ ಕುಲಕರ್ಣಿ, ಶ್ರೀಮತಿ ಕಾಳಾವರ, ಶ್ರೀಮತಿ ಎಸ್. ಆರ್. ಪ್ರಭು, ಶ್ರೀಮತಿ ಅಹಲ್ಯಾ ಬಲ್ಲಾಳ್, ಶ್ರೀ ಗೋಪಾಲ್ ತ್ರಾಸಿ, ಶ್ರೀಮತಿ ಶೀಲಾ ಉಭಯಕರ್, ಶ್ರೀ ಚಂದ್ರಶೇಖರ್ ರಾವ್ ಮೊದಲಾದವರು ಸೇರಿದ್ದರು.

ಕೊನೆಯಲ್ಲಿ ಕಾರ್ಯದರ್ಶಿಗಳಾದ ಶ್ರೀ ಚಂದ್ರಶೇಖರ್ ರಾವ್ ಅವರು ಧನ್ಯವಾದವನ್ನರ್ಪಿಸಿದರು.

**TRIMURTI**
**JEWELLERS**
GOLD AND DIAMOND ORNAMENTS

460/4, Venkatesh Niwas,
Ground Floor, Bhaudaji Road,
Opp Mysore Association,
Matunga (C.Rly.) Mumbai-400 019.

Phone : ***2402 3485***

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938